ಜನಪದ ವೈಚಾರಿಕ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೭ ಜೂನ್-೨೦೦೭ ಸಂಚಿಕೆ-೧೧



ಸಂಪೂರ್ಣಕ್ರಾಂತಿಗಾಗಿ ಜನತೆ ಎಚ್ಚೆತ್ತುಗೊಳ್ಳಲಿ

ಸಂಪೂರ್ಣಕ್ರಾಂತಿ ಸ್ಮರಣ ಸಂಚಿಕೆ

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜೂನ್-೨೦೦೭
ಸಂಪುಟ-೭
ಸಂಚಿಕೆ-೧೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☎ ೦೮೨೩೬ ೨೯೮೭೫೮

e-mail - janapada@yahoo.com

ಶರಧಿ

ಒಡಲೊಳಗಿನ ಕಸವನ್ನು
ಮರಳ ದಂಡೆಗೆ ಚೆಲ್ಲಿ
ಮರಳುತ್ತವೆ
ಅಲೆಗಳು ಮೌನವಾಗಿ

ಸಾಲು ಹಿಡಿದು ಸಾಗುವ
ನೊರೆ ನೊರೆ ತೆರೆಗಳಲ್ಲಿ
ಏಕಮುಖತೆಯ ಸುಳಿವಿಲ್ಲ
ಭೀಕರ ಗಂಭೀರ ಶಾಂತ ಅವಿಶ್ರಾಂತ

ಶಶಿಯ ನೋಟಕೆ ಉಕ್ಕುವ
ರವಿಯ ಸ್ಪರ್ಶಕೆ ಬಿಕ್ಕುವ ಶರಧಿ
ಇರುಳಲ್ಲಿ ಮಲಗುವುದಿಲ್ಲ
ಮರುಗವುದಿಲ್ಲ ಕೊರಗುವುದಿಲ್ಲ
ಬಿಸಿಲಿನ ಝಳಕ್ಕೆ ಆವಿಯಾಗುವುದಿಲ್ಲ
ಕಾಲದೊಂದಿಗೆ ಬದಲಾಗುವ ಸಿದ್ಧಾಂತವನ್ನು
ರುದ್ರ ಸಮುದ್ರ ಒಪ್ಪುವುದಿಲ್ಲ
ಎಲ್ಲೆ ಮೀರದ ಅನಂತ ಚಲನೆಯಲ್ಲಿ
ನಿರಂತರ ಗೇಯತೆಯಿದೆ
ಕ್ಷಣದ ಸ್ತಬ್ಧತೆಯಿದೆ.

– ಅನಂತ ಹುದೆಂಗಜೆ

ವಿಚಾರ ದೀಪ್ತಿ

ನಮ್ಮ ರಾಜಕೀಯ ಸಂಸ್ಥೆಗಳು ಕೆಲಸ ಮಾಡುತ್ತಿರುವ ರೀತಿಯ ಬಗ್ಗೆ ನಮ್ಮ ಜನರಿಗೆ, ಮುಖ್ಯವಾಗಿ ಯುವಕರಿಗೆ, ದೋಷಗಳು ಕಂಡು ಬರುತ್ತಿವೆ. ಹೆಚ್ಚುತ್ತಿರುವ ಭ್ರಷ್ಟಾಚಾರ, ಸಂಘರ್ಷದ ರಾಜಕಾರಣ, ಅಸಹನಾ ಸಂಸ್ಕೃತಿ, ರಾಜಕಾರಣದಲ್ಲಿ ಹಾಗೂ ಸಮಾಜದಲ್ಲಿ ಹಬ್ಬುತ್ತಿರುವ ಹಿಂಸಾಚಾರ ನಮ್ಮ ಯುವ ಜನಾಂಗದ ಕೆಲವು ಸಮೂಹಗಳನ್ನು ಭ್ರಮಿತರನ್ನಾಗಿ ಮಾಡಿವೆ. ಅಲ್ಲದೆ ನಮ್ಮ ರಾಜ್ಯವ್ಯಸ್ಥೆಯ ಪ್ರಜಾತಾಂತ್ರಿಕ ಸಾಮರ್ಥ್ಯದ ಬಗ್ಗೆಯೇ ಅನುಮಾನವುಳ್ಳವರನ್ನಾಗಿ ಮಾಡಿವೆ. ರಾಜಕಾರಣದಲ್ಲಿ ಅಪರಾಧಿಗಳಿರುವುದನ್ನು ನಾವು ಅಲ್ಲಗೆಳೆಯುವಂತಿಲ್ಲ. ಇದು ಯುವಕರಲ್ಲಿ ದಿಗ್ಭ್ರಮೆ ಹುಟ್ಟಿಸುತ್ತದೆ. ಅವರಿಗೆ ಯಾವುದು ಸರಿ, ಯಾವುದು ತಪ್ಪು ಅನ್ನುವುದರ ಬಗ್ಗೆ ಸಂಶಯ ಹುಟ್ಟುತ್ತದೆ. ಹಾಗೆಯೇ, ವಿಛಿದ್ರಕಾರಕ ಮತ್ತು ಜನಾಂಗೀಯ ಶಕ್ತಿಗಳು ನಮ್ಮ ಪ್ರಜಾತಾಂತ್ರಿಕ ಮತ್ತು ಧರ್ಮನಿರಪೇಕ್ಷ ವ್ಯವಸ್ಥೆಗೆ ದೊಡ್ಡ ಆಪತ್ತನ್ನು ಸೃಷ್ಟಿಸಿವೆ. ಯುವಕರು ನಮ್ಮ ಸಮಾಜವನ್ನು ಬಾಧಿಸುತ್ತಿರುವ ವಿವಿಧ ಪ್ರಕಾರದ ಸಮಸ್ಯೆಗಳನ್ನು ನಿವಾರಿಸುವ ಹರಿಕಾರರಾಗಬೇಕಿದೆ. ಇಂದಿಗಿಂತ ಉತ್ತಮ ವ್ಯವಸ್ಥೆಯನ್ನು ದೊರಕಿಸಿಕೊಡುವುದಕ್ಕೆ ನಾಯಕತ್ವವನ್ನೂ ಒದಗಿಸಬೇಕಿದೆ. ಇಂದಿನ ಸಮಾಜದ ಸಮಸ್ಯೆಗಳನ್ನಾಗಲಿ ಅಥವಾ ಸೋಲುಗಳನ್ನಾಗಲಿ ಕುರಿತು ಟೀಕಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ದೇಶವು ಯುವಕರ ಬಗ್ಗೆ ಮಹಾನ್ ನಿರೀಕ್ಷೆಗಳನ್ನಿಟ್ಟುಕೊಂಡಿದೆ. ಪ್ರಜಾತಾಂತ್ರಿಕ ಸಂಸ್ಥೆಗಳಲ್ಲಿಯ ದೋಷಗಳನ್ನು ನಿವಾರಿಸಲು ತಮ್ಮ ಹೊಸ ಬಗೆಯ ದೃಷ್ಟಿಕೋನವನ್ನು ತಮ್ಮ ಯೌವನದ ಬಲದೊಂದಿಗೆ ತರಬೇಕಾಗಿದೆ. ಅವರು ತಮ್ಮ ಕರ್ತವ್ಯಗಳೇನೆಂಬುದನ್ನು ಅರ್ಥಮಾಡಿಕೊಂಡು ರಾಜಕಾರಣದ ಎಲ್ಲ ಸ್ಥರಗಳಲ್ಲಿ ಮತ್ತು ಸಂಸ್ಥೆಗಳಲ್ಲಿ ಹೆಚ್ಚು ಸಕ್ರಿಯವಾಗಬೇಕಿದೆ. ಜನತೆಯ ಆಶೋತ್ತರಗಳನ್ನು ಸಾಕಾರಗೊಳಿಸಲು ನಮ್ಮ ಸಂಸತ್ತು ಶಕ್ತಿದಾಯಕ ಸಾಧನವಾಗಿದೆ. ಅದು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬದಲಾವಣೆಯನ್ನು ತರಲು ಸಮರ್ಥವಿದೆ. ಸಂಸತ್ತನ್ನು ಮತ್ತು ರಾಜಕೀಯ ವ್ಯವಸ್ಥೆಯನ್ನು ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡಲು ಕಂಕಣಬದ್ಧರಾದ ಮತ್ತು ಒಳ್ಳೆಯ ಉದ್ದೇಶ, ಜನರ ಸಮಸ್ಯೆಗಳ ಬಗ್ಗೆ ಸಕಾರಾತ್ಮಕ ಹಾಗೂ ಪ್ರಗತಿದಾಯಕ ಮನೋಭಾವವನ್ನಿಟ್ಟುಕೊಂಡಿರುವ ಯುವಕರು ಬೇಕಿದೆ ಮತ್ತು ಅವರು ಮುಂದೆ ಬಂದು ರಾಜಕೀಯ ಸ್ಥಾನಗಳನ್ನು ಹಿಡಿಯಬೇಕಿದೆ.

– ಸೋಮನಾಥ ಚಟರ್ಜಿ

ಸಂಪೂರ್ಣಕ್ರಾಂತಿಗಾಗಿ ಜನತೆ ಎಚ್ಚೆತ್ತುಕೊಳ್ಳಲಿ

– ಸುರೇಂದ್ರ ಕೌಲಗಿ

ರಾಜ್ಯಶಕ್ತಿ ಮತ್ತು ದಂಡಶಕ್ತಿಯನ್ನು ನಿಯಂತ್ರಣದಲ್ಲಿಡುವ ಲೋಕಶಕ್ತಿ ನಿರ್ಮಾಣಗೊಳ್ಳಲಿ.

–ಜಯಪ್ರಕಾಶ ನಾರಾಯಣ

ಜೂನ್ ೫ "ಸಂಪೂರ್ಣಕ್ರಾಂತಿ'ಯ ಜನನ ದಿನ. ಆದರೆ ದೇಶದ ಯುವಕರು ಅದನ್ನು ಮರೆತ ದಿನವೂ ಹೌದು! ಸಂಪೂರ್ಣಕ್ರಾಂತಿಯಲ್ಲಿ ತೊಡಗಿದ್ದವರು ಯುವಕರು ಮತ್ತು ವಿದ್ಯಾರ್ಥಿಗಳು. ರಷಿಯಾದಲ್ಲಿ ನಡೆದ ಯುವ ಕ್ರಾಂತಿಗೆ ಸಮಾನವಾದದ್ದು ಸಂಪೂರ್ಣಕ್ರಾಂತಿ. ದೇಶದ ಯುವಶಕ್ತಿ ಜಾಗೃತಗೊಂಡರೆ, ಸಂಘಟಿತಗೊಂಡರೆ ಎಂಥ ರಾಜಕೀಯ ಹಾಗೂ ಸಾಮಾಜಿಕ ಸ್ಥಿತ್ಯಂತರಗಳನ್ನು ಮಾಡಬಲ್ಲರೆಂಬುದಕ್ಕೆ ಜಯಪ್ರಕಾಶ ನಾರಾಯಣರ ನೇತೃತ್ವದ ಸಂಪೂರ್ಣಕ್ರಾಂತಿ ಒಂದು ಸ್ಪಷ್ಟ ಉದಾಹರಣೆ. ೧೯೭೦ರ ದಶಕಗಳಲ್ಲಿ ಭಾರತದಲ್ಲಿ ಯಾವ ಪ್ರಕಾರದ ಅಸಂತೋಷ ರಾಜ್ಯ ವ್ಯವಸ್ಥೆಯ ಬಗ್ಗೆ ಮತ್ತು ಸಾಮಾಜಿಕ ಮೌಲ್ಯಗಳ ಕುಸಿತದ ಬಗ್ಗೆ ಜನಸಾಮಾನ್ಯರಲ್ಲಿ ಮೂಡಿತ್ತೋ ಅಂಥದ್ದೇ ಅಸಂತೋಷ ಈಗ್ಗೆ ಮೂವತ್ತುಮೂರು ವರ್ಷಗಳ ನಂತರ ಮೂಡಿದೆ. ಆಗ ಮೂಡಿದ್ದ ಅಸಂತೋಷ ಏಕ ವ್ಯಕ್ತಿಯ ಸರ್ವಾಧಿಕಾರದ ವಿರುದ್ಧ ಇತ್ತು. ಇಂದು ಅಂಥ ಪರಿಸ್ಥಿತಿ ಇಲ್ಲ ಎಂಬುದೇನೋ ನಿಜ. ಆದರೆ ಆ ಸರ್ವಾಧಿಕಾರದ ಸ್ಥಾಪನೆಗೆ ಕಾರಣವಾಗಿದ್ದಂಥ ಸಂಗತಿಗಳು ಇಂದು ನಮ್ಮ ದೇಶದುದ್ದಕ್ಕೂ ಹರಡಿಕೊಂಡಿದೆಯೆಂಬುದನ್ನು ಉದಾಸೀನ ಮಾಡುವಂತಿಲ್ಲ. ಉದಾಸೀನಮಾಡಿದ್ದೇಯಾದರೆ ಯಾವುದೋ ವಿಶಿಷ್ಟ ಪ್ರಕಾರದ ಸರ್ವಾಧಿಕಾರತ್ವ ಬರುವ ದೂರದ ಸಾಧ್ಯತೆಯಿದೆ. ಆ ಸರ್ವಾಧಿಕಾರತ್ವ ೧೯೭೫ರಲ್ಲಿ ಆಗಿದ್ದಂತೆ ಪ್ರಜಾಪ್ರಭುತ್ವದ ಮುಖವಾಡ ಧರಿಸಿದ ಏಕ ವ್ಯಕ್ತಿಯ ಸರ್ವಾಧಿಕಾರವಾಗಬಹುದು, ಇಲ್ಲವೆ ನೆರೆ ರಾಷ್ಟ್ರಗಳಲ್ಲಿರುವಂತೆ ಸೈನ್ಯಾಧಿಕಾರಿಯ ಸರ್ವಾಧಿಕಾರವಾಗಬಹುದು. ನಮ್ಮ ದೇಶದಲ್ಲಿ ಪ್ರಜಾತಾಂತ್ರಿಕಾಧಾರವಾಗಿ ಸಂವಿಧಾನ ರಚನೆಯೊಂದಿಗೆ ಗಣರಾಜ್ಯಾಧಾರಿತ ಪ್ರಜಾಪ್ರಭುತ್ವವೇನೋ ಜಾರಿಗೆ ಬಂದಿತು. ಈ ಸಂವಿಧಾನ, ಈ ಗಣರಾಜ್ಯ ಎಂಥ ಸಾಮಾಜಿಕ ವಿಪ್ಲವವನ್ನೂ ಎದುರಿಸಬಲ್ಲವೆಂಬ ಭ್ರಮೆಯಿಂದ ಹೊರಬರಬೇಕಾದ ಕಾಲ ಈಗ ತುರ್ತಾಗಿ ಬಂದಿದೆ. ೧೯೭೫ರಲ್ಲಿ ದೇಶದಲ್ಲಿ ತುರ್ತುಪರಿಸ್ಥಿತಿಯ ಘೋಷಣೆಯಾಗಿ ಏಕವ್ಯಕ್ತಿ ಸರ್ವಾಧಿಕಾರ ಜಾರಿಗೆ ಬರುವ ಮುನ್ನವೂ ನಮ್ಮ ಈಗಿನ ಸಂವಿಧಾನವೂ ಇತ್ತು, ಗಣರಾಜ್ಯವೂ ಇತ್ತು, ಪ್ರಜಾಪಭುತ್ವವೂ ಇತ್ತು. ಆದರೆ ಆಗ ಜನರಲ್ಲಿ

ರಾಜ್ಯವ್ಯವಸ್ಥೆಯ ವಿರುದ್ಧ, ಸಾಮಾಜಿಕ ಅಪಮೌಲ್ಯಗಳ ವಿರುದ್ಧ ಉಂಟಾದ ಅಸಂತೋಷಾಧಾರಿತ ವಿಪ್ಲವವನ್ನು ಎದುರಿಸಲು ಆ ಸಂವಿಧಾನಕ್ಕೆ ಸಾಧ್ಯವಾಗಲಿಲ್ಲ. ಯಾವ ಸಂವಿಧಾನವು ಪ್ರಜಾಪ್ರಭುತ್ವವನ್ನು ಸುರಕ್ಷಿತವಾಗಿಡಬಲ್ಲದೆಂದು ಅಮಾಯಕ ದೇಶವಾಸಿಗಳು ಭಾವಿಸಿದ್ದರೋ ಅದೇ ಸಂವಿಧಾನ ಕಾಗದದ ಎಲ್ಲ ಪುಸ್ತಕಗಳಂತೆ ಮೂಲೆಗೆ ಬಿದ್ದಿತು, ದೇಶವಾಸಿಗಳ ಬಾಯಿಗೆ ಬೀಗ ಬಿತ್ತು. ಕೈ ಕಾಲುಗಳಿಗೆ ಹಗ್ಗದ ಕಟ್ಟು ಬಿತ್ತು. ತನ್ನ ಯೌವನಾವಸ್ಥೆಯಿಂದಲೂ ಪ್ರಜಾ ಪ್ರಭುತ್ವವನ್ನೂ, ಸ್ವಾತಂತ್ರ್ಯವನ್ನೂ, ಸಜ್ಜನಿಕೆಯ ಮೌಲ್ಯಗಳನ್ನೂ, ಪ್ರೀತಿಸುತ್ತಾ ರಾಜ್ಯಶಕ್ತಿಯನ್ನು ಖಂಡಿಸುತ್ತಾ, ಲೋಕಶಕ್ತಿಯನ್ನು ಬೆಂಬಲಿಸುತ್ತಾ ಬಂದು ತದನಂತರ ಇಡೀ ಭಾರತ ದೇಶದಲ್ಲಿ ಸರ್ವೋದಯ ಸಮಾಜ ರಚನೆಯಾಗಬೇಕೆಂದು ಯಾರು ತನ್ನ ಜೀವನವನ್ನೇ ದಾನ ಮಾಡಿದ್ದರೋ ಮತ್ತು ಭಾರತೀಯ ಆತ್ಮದ ಸಾಕ್ಷಿಯಾಗಿದ್ದರೋ ಅಂಥ ಜಯಪ್ರಕಾಶ ನಾರಾಯಣರು ತಮ್ಮ ೭೩ರ ಇಳಿ ವಯಸ್ಸಿನಲ್ಲಿ ಕಾರಾಗೃಹಕ್ಕೆ ಹೋಗಬೇಕಾಯಿತು. ಅವರೊಂದಿಗೆ ದೇಶದಾದ್ಯಂತ ಅನೇಕ ಯುವಕರು, ಪ್ರಜಾಪ್ರಭುತ್ವ ಆರಾಧಕರು ಕಾರಾಗೃಹವನ್ನು ಸೇರಬೇಕಾಯಿತು. ಇಷ್ಟು ದುರ್ಬಲವಾಗಿತ್ತು ನಮ್ಮ ಸಂವಿಧಾನ ಮತ್ತು ಗಣರಾಜ್ಯ.

ಈಗ ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳ ನಂತರ, ಸಂವಿಧಾನ ಜಾರಿಗೆ ಬಂದು ಐವತ್ತಾರು ವರ್ಷಗಳ ನಂತರ, ಮೊದಲ ಸ್ವಾತಂತ್ರ್ಯ ಯುದ್ಧ ನಡೆದು ೧೫೦ ವರ್ಷಗಳ ನಂತರ, ತಂತ್ರಜ್ಞಾನದಲ್ಲಿಯೂ, ಕ್ಷಿಪಣಿ ತಯಾರಿಕೆಯಲ್ಲಿಯೂ, ಗಗನನೌಕೆಗಳ ತಯಾರಿಕೆಯ ಮಹತ್ಸಾಧನೆಯ ನಂತರವೂ, ಚಂದ್ರಯಾನದ ಯೋಜನೆ ಹಾಕಿಕೊಂಡಾದ ನಂತರವೂ, ಎರಡು ಪಕ್ಷಗಳ ರಾಜಕಾರಣ ಹಾಗೂ ಅನೇಕ ಪಕ್ಷಗಳ ರಾಜಕಾರಣದ ಅನುಭವದ ನಂತರವೂ, ಏಕಪಕ್ಷದ ಸರ್ಕಾರ, ಸಂಯುಕ್ತ ಪಕ್ಷಗಳ ಸರ್ಕಾರದ ಆಡಳಿತಾನುಭವದ ನಂತರವೂ, ಕೋಟಿ ಕೋಟಿ ರೂಪಾಯಿಗಳ ವ್ಯಯದ ಹತ್ತು ಪಂಚವಾರ್ಷಿಕ ಯೋಜನೆಗಳ ನಂತರವೂ, ಇನ್ನೂರಕ್ಕೂ ಹೆಚ್ಚು ವಿಶ್ವ ವಿದ್ಯಾನಿಲಯಗಳ ಸ್ಥಾಪನೆಯ ನಂತರವೂ, ಸಾರ್ವತ್ರಿಕ ಶಿಕ್ಷಣದ ಅಭಿಯಾನದ ನಂತರವೂ, ದೇಶದಾದ್ಯಂತ ಗಾಂಧೀ ಭವನ – ಅಂಬೇಡ್ಕರ್ ಭವನಗಳ ನಿರ್ಮಾಣದ ನಂತರವೂ, ಸುಮಾರು ಹನ್ನೆರಡು ಸಾರ್ವತ್ರಿಕ ಚುನಾವಣೆಗಳ ನಂತರವೂ, ದೇಶವ್ಯಾಪಿ ಪಂಚಾಯತ್ ರಾಜ್ಯ ಸ್ಥಾಪನೆಯಾದ ನಂತರವೂ ಪ್ರಾದೇಶಿಕ ರಾಜಕೀಯ ಪಕ್ಷ ಅಥವಾ ಸಂಘಟನೆಗಳ ರಚನೆಯ ನಂತರವೂ, ಸಂಪರ್ಕ ಮಾಧ್ಯಮದಲ್ಲಿಯ ಅಗಾಧ ಬೆಳವಣಿಗೆಯ ನಂತರವೂ, ಬೃಹತ್ ನಗರಗಳ ಸ್ಥಾಪನೆಯ ನಂತರವೂ, ಧರ್ಮನಿರಪೇಕ್ಷ ಹಾಗೂ ಜಾತ್ಯಾತೀತ ರಾಷ್ಟ್ರವೆಂದು ಘೋಷಣೆಯಾದ ನಂತರವೂ, ಹಸಿರು ಕ್ರಾಂತಿ ಮತ್ತು ಕ್ಷೀರಕ್ರಾಂತಿಯ ನಂತರವೂ, ಔದ್ಯೋಗಿಕ ಕ್ರಾಂತಿಯ ನಂತರವೂ

ನಮ್ಮ ದೇಶದ ಇಂದಿನ ಆರ್ಥಿಕ ಸಾಮಾಜಿಕ ಸ್ಥಿತಿ ಹೇಗಿದೆ, ಹಳ್ಳಿಗರ ಸ್ಥಿತಿಗತಿಗಳು ಹೇಗಿದೆ, ದೇಶದ ನರನಾಡಿಗಳಾದ ಯುವಕರ ಮನೋಭಾವ ಹೇಗಿದೆ, ರಾಜಕಾರಣಿಗಳ ದಕ್ಷತೆ, ನೈತಿಕತೆ, ಹೊಣೆಗಾರಿಕೆ ಹೇಗಿದೆ, ನಮ್ಮ ದೇಶದ ಅಭಿವೃದ್ಧಿ ನಿಯೋಜಕರ ಮನೋಸ್ಥಿತಿ ಹೇಗಿದೆ, ದೇಶದ ಬೆನ್ನೆಲುಬಾದ ರೈತರ ಸ್ಥಿತಿಗತಿಗಳು ಮನೋಸ್ಥಿತಿ ಹೇಗಿದೆ, ಶಿಕ್ಷಣದ ಗುಣಮಟ್ಟ ಹೇಗಿದೆ, ಜನಸಾಮಾನ್ಯರ ಕಾರ್ಯಕುಶಲತೆ ಹೇಗಿದೆ, ಪ್ರಾಮಾಣಿಕತೆ ಹೇಗಿದೆ, ಪ್ರಕೃತಿ ಸಂಕುಲವನ್ನೂ, ಮಾನವನನ್ನೂ ಕಾಪಾಡುವ ಪರಿಸರದ ಸ್ಥಿತಿ ಹೇಗಿದೆ, ರಾಷ್ಟ್ರದ ಆರ್ಥಿಕ ಪರಸ್ಥಿತಿ ಹೇಗಿದೆ, ರಾಷ್ಟ್ರದ ಮತ್ತು ಪ್ರತಿಯೊಂದು ರಾಜ್ಯಗಳ ಸಾಲದ ಭಾರ ಹೇಗಿದೆ, ದೇಶದ ಪ್ರತಿಯೊಬ್ಬ ನಿವಾಸಿಯ ತಲೆಯ ಮೇಲೆ ಸಾಲದ ಭಾರ ಹೇಗಿದೆ, ದೇಶದ ರಕ್ಷಣೆಗಾಗಿ ಮತ್ತು ಆಂತರಿಕ ಶಾಂತಿ ಕಾಪಾಡುವುದಕ್ಕಾಗಿ ದೇಶದ ಒಟ್ಟೂ ಆದಾಯದಲ್ಲಿ ಎಷ್ಟು ಹಣ ಖರ್ಚಾಗುತ್ತಿದೆ, ಮಹಿಳೆಯರ ಗೌರವದ ಸ್ಥಿತಿ ಹೇಗಿದೆ, ದೇಶದ ಮಠಮಾನ್ಯ, ಮಸೀದಿ, ಚರ್ಚ್, ದೇವಾಲಯಗಳನ್ನು ನಡೆಸುವವರ ಮನೋಭಾವ ಹೇಗಿದೆ ಇವೆಲ್ಲವುಗಳೂ ಇಂದು ನಮ್ಮ ದೇಶ ಎದುರಿಸುತ್ತಿರುವ ಸಮಸ್ಯೆಗಳು. ಈ ಸಮಸ್ಯಗಳ ಪಟ್ಟಿ ಇಷ್ಟು ದೊಡ್ಡದಾಗಿದ್ದರೂ ಅದು ಒಟ್ಟಾರೆ ಸಮಸ್ಯೆಗಳ ಪ್ರಾತಿನಿಧಿಕ ಪಟ್ಟಿ ಆಗಬಲ್ಲದೇ ಹೊರತು ಅಂತಿಮ ಪಟ್ಟಿಯಾಗಲಾರದು. ಅಲ್ಲದೆ ಈ ಸಮಸ್ಯೆಗಳ ಆಳ-ಉದ್ದ-ಅಗಲ ಇದರಲ್ಲಿ ವರ್ಣಿತವಾಗಿಲ್ಲ. ಇಲ್ಲಿಯ ಒಂದೊಂದು ಸಮಸ್ಯೆಯೂ ಗಹನವಾದ ಅಧ್ಯಯಕ್ಕೆ ಯೋಗ್ಯವಾದ ವಿಷಯವಾಗಿದೆಯಷ್ಟೇ ಅಲ್ಲ, ಅಂಥ ಅಧ್ಯಯನವನ್ನು ಮಾಡಿ ಗ್ರಂಥಗಳನ್ನು ಪ್ರಕಟಿಸಿದ್ದೇ ಆದರೆ ಅವುಗಳ ಸಂಖ್ಯೆ ಅಗಣಿತವಾಗುವುದು.

ಇಂದು ದೇಶದ ಸಾಮಾಜಿಕ ಸ್ಥಿತಿಗತಿಗಳು ಹೇಗಿವೆಯೆಂದರೆ ರಾಷ್ಟ್ರಪಿತ ಗಾಂಧೀಜಿಯವರು ಹೇಳಿದ್ದ ಆ ಸಪ್ತ ಸಾಮಾಜಿಕ ಪಾತಕಗಳು ಸಮಸ್ತ ಭಾರತೀಯರ ಜೀವನಾನುಭವಕ್ಕೆ ಬರುತ್ತಿವೆ. ಅವು ಯಾವುವೆಂದರೆ ತತ್ವರಹಿತವಾದ ರಾಜಕೀಯ, ದುಡಿಮೆಯಿಲ್ಲದ ಅಂದರೆ ಶರೀರಶ್ರಮ ವಿದೂರವಾದ ಸಂಪತ್ತಿನ ಸಂಗ್ರಹ, ಅನೀತಿಯಿಂದ ಕೂಡಿದ ವಾಣಿಜ್ಯ-ವ್ಯಾಪಾರ-ಕೈಗಾರಿಕಾ ವ್ಯವಹಾರಗಳು, ಶೀಲವಿಲ್ಲದ ಶಿಕ್ಷಣ, ಆತ್ಮಸಾಕ್ಷಿರಹಿತ ಭೋಗ, ಮಾನವತಾಶೂನ್ಯ ವಿಜ್ಞಾನ, ತ್ಯಾಗವಿಲ್ಲದ ಪೂಜೆ. ಈ ಏಳು ಪ್ರಕಾರದ ಪಾತಕಗಳು ಮತ್ತು ಅವುಗಳ ಪರಿಣಾಮವಾಗಿ ಹುಟ್ಟಿರುವ ಸಾವಿರಾರು ಮರಿಪಾತಕಗಳು ನಮ್ಮೀ ಇಪ್ಪತ್ತೊಂದನೇ ಶತಮಾನದ ಮಾನವ ಪೀಳಿಗೆಯನ್ನು ಪೀಡಿಸುತ್ತಿವೆ. ಯಾವ ಸಂಯುಕ್ತರಾಷ್ಟ್ರದ ನೀತಿ ಸಂಹಿತೆಯಾಗಲಿ, ವಿಶ್ವಬ್ಯಾಂಕಿನ ನಿಯಮಗಳಾಗಲಿ ಈ ಪಾತಕಗಳನ್ನು ನಿಯಂತ್ರಣದಲ್ಲಿಡಲು ಅಸಮರ್ಥವಾಗುತ್ತಿವೆ. ಈ ಅಸಮರ್ಥ್ಯದ ಪರಿಣಾಮ ಜನಮಾನಸದ ಮೇಲೆ ಭಯಂಕರವಾಗಿ ಆಗುತ್ತಿದೆ. ಆಧುನಿಕ ಮಾನವನ ಸುತ್ತ

ಝಣಝಣ ರುಪಾಯಿ ಸದ್ದೇನೋ ಮಾಡುತ್ತಿದೆ, ಭವ್ಯ ಕಟ್ಟಡಗಳೂ, ಹೆದ್ದಾರಿಗಳೂ, ನಗರಗಳೂ ಎದ್ದು ನಿಲ್ಲುತ್ತಿವೆ, ಎಲ್ಲೆಲ್ಲೂ 'ನಡೆನುಡಿ'ಗಳ ಅಂದರೆ ಮೊಬೈಲುಗಳ ರಿಂಗಣ ಕೇಳುತ್ತಿದೆ, ಶಾಲಾ-ಕಾಲೇಜು-ವಿಶ್ವವಿದ್ಯಾನಿಲಯಗಳು ಕೆಲಸಮಾಡುತ್ತಿವೆ, ಆಸ್ಪತ್ರೆಗಳ ಸಂಖ್ಯೆ ಬೆಳೆಯುತ್ತಿದೆ. ಆದರೆ ಮಾನವನ ಮನಸ್ಸು ಮಾತ್ರ ಅತಿ ಸೂಕ್ಷ್ಮಗೊಳ್ಳುತ್ತಾಹೋಗುತ್ತಿದೆ. ಯಾವುದೇ ಪ್ರಕಾರದ ಆಘಾತವನ್ನು ತಡೆಯಲಾಗದಷ್ಟು ಸೂಕ್ಷ್ಮವಾಗುತ್ತಿದೆ. ಆದ್ದರಿಂದ ಎಲ್ಲೆಲ್ಲೂ ಸಣ್ಣ ಸಣ್ಣ ಕಾರಣಕ್ಕಾಗಿ ಆತ್ಮಹತ್ಯೆಗಳು ಸರ್ವೆಸಾಮಾನ್ಯವಾಗಿವೆ. ಮೇಲೆ ವಿವರಿಸಲಾದ ಸಪ್ತ ಪಾತಕಗಳ ಕಾರಣದಿಂದಾಗಿ ನಿರ್ಮಾಣಗೊಂಡಿರುವ ಕಣ್ಣು ಕೋರೈಸುವ ಆಧುನಿಕ ಭೌತಿಕ ಪ್ರಗತಿಯ ಕೆಳಭಾಗದಲ್ಲಿ ತಾಜ್‌ಮಹಲ್‌ನಂಥ ಸುಂದರವಾದ, ಭವ್ಯವಾದ ಕಟ್ಟಡದ ಕೆಳಗೆ ಮನುಷ್ಯರ ಸಮಾಧಿಗಳಿರುವಂತೆ ಆಧುನಿಕ ಭೌತಿಕ ಪ್ರಗತಿಯ ಕೆಳಗೂ ಮನುಷ್ಯರ ಸಮಾಧಿಗಳೇ ಉಳಿಯುವ ಭಯದ ಕತ್ತಿ ಇಂದು ವಿಶ್ವದ ನೆತ್ತಿಯ ಮೇಲೆ ನೇತಾಡುತ್ತಿದೆ. ಮನುಷ್ಯರಲ್ಲಿ ಈಗಿರುವ ವಿಕೃತಮನಸ್ಸು ಸುಕೃತಗೊಳ್ಳದಿದ್ದರೆ ಜಗತ್ತು ಮಾನವ ಗೋರಿಯಾಗದೆ ಇರದು, ಮನುಷ್ಯನ ಸಮಾಧಿಯಾದೀತು.

ಇಂಥ ಭೀಕರ ಭವಿಷ್ಯವನ್ನು ತಪ್ಪಿಸಬೇಕೆಂದು ಇಂದಿನ ಯುವಕರು, ವಿದ್ಯಾರ್ಥಿಗಳು, ಜನಸಾಮಾನ್ಯರು ಸಕಾರಾತ್ಮಕ ದೃಷ್ಟಿಯಿಂದ ಯೋಚಿಸಲು ಪ್ರಾರಂಭಿಸಬೇಕು. ಇಂದಿನ ಪ್ರಕ್ಷುಬ್ಧ ಪರಿಸ್ಥಿತಿಯ ವಿರುದ್ಧ ಕ್ರಾಂತಿಯನ್ನು ಹೂಡಬೇಕು. ಅದು ಜಯಪ್ರಕಾಶ್ ನಾರಾಯಣ ಪ್ರಣೀತ ಸಂಪೂರ್ಣಕ್ರಾಂತಿಯಾಗಬೇಕು. ಜೀವನದ ಚಟುವಟಿಕೆಯ ಪ್ರತಿಯೊಂದು ಅಂಗ-ಅಂಗವನ್ನು ಆ ಕ್ರಾಂತಿ ಸ್ಪರ್ಶಿಸಿ ಅಲ್ಲಿ ಆ ಸಪ್ತ ಪಾತಕಗಳ ಸ್ಥಳದಲ್ಲಿ ತತ್ವ ಸಹಿತವಾದ ರಾಜಕಾರಣ, ಶರೀರಶ್ರಮದಿಂದಲೇ ಸಂಪತ್ತು, ನೀತಿಸಹಿತ ವಾಣಿಜ್ಯ, ಶೀಲಸಹಿತ ಶಿಕ್ಷಣ, ಆತ್ಮಸಾಕ್ಷಿಸಹಿತ ಭೋಗ, ಮಾನವತಾಪೂರ್ಣ ವಿಜ್ಞಾನ, ತ್ಯಾಗ ಸಹಿತ ಪೂಜೆ ಎಂಬ ಮೌಲ್ಯಗಳು ಸ್ಥಾಪಿತಗೊಳ್ಳಬೇಕು. ಈ ಮೌಲ್ಯಗಳ ಸ್ಥಾಪನೆಗಾಗಿಯೇ ೧೯೭೪ರಲ್ಲಿ ಜಯಪ್ರಕಾಶರು ಇದೇ ಜೂನ್ ೫ರಂದು ಬಿಹಾರದ ರಾಜಧಾನಿ ಪಾಟ್ನಾದ ಗಾಂಧೀ ಮೈದಾನದಲ್ಲಿ ಸೇರಿದ್ದ ಲಕ್ಷೋಪಲಕ್ಷ ಜನಸಮುದಾಯದ ಸಭೆಯಲ್ಲಿ ಸಪ್ತಮುಖಿ ಸಂಪೂರ್ಣಕ್ರಾಂತಿಯನ್ನು ಘೋಷಣೆಮಾಡಿದರು. ಅದರ ಪರಿಣಾಮವಾಗಿ ಅವರು ಕಾರಾಗೃಹಕ್ಕೆ ಹೋಗಬೇಕಾಯಿತು! ಅವರು ಕಾರಾಗೃಹಕ್ಕೆ ಹೋದ ಮೊದಲ ದಿನ ಜುಲೈ ೨೧, ೧೯೭೫ ರಂದು ತಮ್ಮ ದಿನಚರಿಯಲ್ಲಿ ಬರೆದ ಮಾತುಗಳು ಇಂದಿಗೂ

ಮನಸ್ಸಿನಲ್ಲಿ ದುಃಖದ ತರಂಗಗಳನ್ನು ಎಬ್ಬಿಸುತ್ತವೆ. ಅವರು ಬರೆದದ್ದು ಹೀಗೆ "ನನ್ನ ಪ್ರಪಂಚ ನುಚ್ಚು ನೂರಾಗಿ ಸುತ್ತಲೂ ಬಿದ್ದಿದೆ. ಮತ್ತೆ ನನ್ನ ಜೀವಮಾನದಲ್ಲಿ ಅದು ಕೂಡಿಕೊಳ್ಳುವುದನ್ನು ನೋಡಲಾರೆ ಎಂಬ ಭಯ ನನಗಿದೆ. ನನ್ನ ಕಿರಿಯ ಬಂಧುಗಳು ಬಹುಶಃ ಅದನ್ನು ಕಂಡಾರೋ ಎಂದೂ ಹೇಳಲಾರೆ!."

ಜಯಪ್ರಕಾಶ್ ನಾರಾಯಣರ ಈ ದುಃಖದ ಮಾತುಗಳನ್ನು ಸುಳ್ಳುಮಾಡಬೇಕಾದ ಹೊಣೆಗಾರಿಕೆ ಇಂದಿನ ಯುವಕರ ಮತ್ತು ವಿದ್ಯಾರ್ಥಿಗಳದ್ದಾಗಿದೆ. ಜಯಪ್ರಕಾಶರೇ ಈ ಮಾತುಗಳನ್ನು ತಮ್ಮ ಜೈಲು ದಿನಚರಿಯಲ್ಲಿ ಹೀಗೆ ಕಾಣಿಸಿದ್ದಾರೆ "ಸಂಪೂರ್ಣಕ್ರಾಂತಿಯ ನನ್ನ ಕಲ್ಪನೆಯನ್ನು ಭೂಮಿಯ ಮೇಲೆ ಇಳಿಸುವ ಸಾಮರ್ಥ್ಯ ಯುವಶಕ್ತಿಯ ಕೈಯಲ್ಲಿದೆ. ಆದರೆ ಆ ದಿನ ನೋಡಲು ನಾನು ಬದುಕಿ ಉಳಿಯಲಾರೆ. ಈ ಕಾರ್ಯದಲ್ಲಿ ತೊಡಗಿರುವ ತರುಣರಿಗಾಗಿ ನನ್ನ ಶುಭ ಕಾಮನೆಗಳು."

ಜಯಪ್ರಕಾಶ್ ನಾರಾಯಣರು ಆಧ್ಯಾತ್ಮಿಕ ಮೌಲ್ಯಗಳ ಆಧಾರದ ಮೇಲೆ, ಅಹಿಂಸೆಯ ಆಧಾರದ ಮೇಲೆ ಸಂಪೂರ್ಣಕ್ರಾಂತಿ ಕಟ್ಟಲು ಬಯಸಿದ್ದರು. ಪ್ರತಿಯೊಬ್ಬ ವ್ಯಕ್ತಿಯ ಸರ್ವಾಂಗೀಣ ವಿಕಾಸದ ಅವಕಾಶವುಳ್ಳ ಪ್ರಜಾಪ್ರಭುತ್ವ ಪ್ರೇಮಿ ಮತ್ತು ಸ್ವಾತಂತ್ರ್ಯ ಪ್ರೇಮಿಯಾಗಿದ್ದರು ಜಯಪ್ರಕಾಶ್ ನಾರಾಯಣರು. ಅವರನ್ನು ಐರ್ಲೆಂಡಿನ ಸ್ವಾತಂತ್ರ್ಯಪ್ರೇಮಿ ಮ್ಯಾಕಸ್ವಿನಿಯವರಿಗೆ ಹೋಲಿಸಬಹುದು. ಮ್ಯಾಕಸ್ವಿನಿ ಸ್ವಾತಂತ್ರ್ಯಕ್ಕಾಗಿ ಉಪವಾಸಮಾಡಿ ಬಲಿದಾನಮಾಡಿಕೊಂಡರು. ಉಪವಾಸದ ೭೬ನೆಯ ದಿನ ಮೃತ್ಯು ಸನ್ನಿಧಿಯಲ್ಲಿದ್ದಾಗ ಅವರು ಹೀಗೆ ಹೇಳಿದರು "ಜಗತ್ತಿನಲ್ಲಿಯ ಎಲ್ಲ ಸಾಮ್ರಾಜ್ಯಗಳ ಸರ್ವಸೇನೆಯನ್ನು ಒಂದೆಡೆಯಲ್ಲಿ ಸೇರಿಸಿದರೂ ಒಬ್ಬ ಆತ್ಮಶಕ್ತಿಯ ಪುರುಷನನ್ನು ಪರಾಭವಮಾಡಲು ಸಾಧ್ಯವಿಲ್ಲ." ಇಂಥ ಆತ್ಮವಿಶ್ವಾಸದ ವ್ಯಕ್ತಿಯಾಗಿದ್ದರು ಜಯಪ್ರಕಾಶ್ ನಾರಾಯಣರು. ಅಂಥ ವ್ಯಕ್ತಿ ಪ್ರಾರಂಭಿಸಿದ್ದ ಸಂಪೂರ್ಣಕ್ರಾಂತಿ ವಿಚಾರದ ಬಲದಿಂದ ಇಂದಿನ ಯುಗದ ಸಾಂಸ್ಕೃತಿಕ ಅಧೋಗತಿಯನ್ನು ಊರ್ಧ್ವಗತಿಯತ್ತ ಮುಖಮಾಡಿಸುವುದಕ್ಕಾಗಿ ಜನತೆ ಎಚ್ಚೆತ್ತುಗೊಳ್ಳಬೇಕಾಗಿದೆ.

* * *

ಸಂಪೂರ್ಣಕ್ರಾಂತಿಯ ರಾಜಕೀಯ ಪರಿಕಲ್ಪನೆ

- ಎಚ್.ಎಸ್. ದೊರೆಸ್ವಾಮಿ

ಇಂದಿನ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವೈಫಲ್ಯಗಳನ್ನು ಗಮನಿಸಿದಾಗ, ರಾಜಕೀಯ ಪಕ್ಷಗಳ ದುರವಸ್ಥೆಯನ್ನು ನೋಡಿದಾಗ, ಜೆ.ಪಿ. ಅವರ ಸಂಪೂರ್ಣ ಕ್ರಾಂತಿ ಇಂದಿನ ತುರ್ತು ಅವಶ್ಯಕತೆ ಎಂದು ಯಾರಿಗಾದರೂ ಅನಿಸೀತು. ನಮ್ಮ ಯುವಕರು ಇಂದಿನ ರಾಜಕೀಯ ದಿವಾಳಿತನವನ್ನು ಗಮನಿಸಿ ಸಂಘಟಿತ ಹೋರಾಟಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುವುದು ಅನಿವಾರ್ಯವೆನಿಸಿದೆ.

ಜೆಪಿಯವರ ಕಲ್ಪನೆಯ ಸಂಪೂರ್ಣಕ್ರಾಂತಿ ಕೈಗೂಡಬೇಕಾದರೆ ಮೊದಲು ನಮ್ಮ ಸಮಾಜದ ಲೋಪದೋಷಗಳನ್ನು ಕಿತ್ತೊಗೆಯಬೇಕು. ಜಯಪ್ರಕಾಶರ ಪ್ರಕಾರ ನಮ್ಮ ಸಮಾಜ ಒಂದು Human Jungle. ಒಬ್ಬರು ಒಬ್ಬರನ್ನು ಶೋಷಿಸಿ ಬದುಕುವುದು ಇಲ್ಲಿಯ ನಿಯಮ. ಎಲ್ಲ ಬಗೆಯ ಅಸಮಾನತೆ ಭಾರತದಲ್ಲಿ ಮನೆಮಾಡಿದೆ. ದುರ್ವ್ಯಸನಗಳು ಸಮಾಜವನ್ನು ಆವರಿಸಿಕೊಂಡಿವೆ. ಕ್ಯಾಬರೆ, ಕುಡಿತ, ಕುದುರೆ ಜೂಜು, ಲಾಟರಿ, ಷೇರು ಮಾರುಕಟ್ಟೆ ಎಲ್ಲವೂ ಮನುಷ್ಯನನ್ನು ಅಮಾನವೀಯನನ್ನಾಗಿ ಮಾಡುತ್ತಿವೆ. ಇವೆಲ್ಲದರ ವಿರುದ್ಧವಾಗಿ ಕ್ರಾಂತಿ ಮಾಡಬೇಕಾಗಿದೆ.

ನಮ್ಮ ಸಮಾಜ ಜೇಡಿಮಣ್ಣಿನಂತೆ ಜಿಗುಟಾಗಿರಬೇಕು. ಸಮಾಜದ ಎಲ್ಲರನ್ನೂ ಸಮಾನತೆಯ ಆಧಾರದ ಮೇಲೆ ಒಂದುಗೂಡಿಸಬೇಕು. ಈಗಿನ ಸಮಾಜ ಮರಳು ಕಣಗಳಂತೆ ಪ್ರತ್ಯೇಕತೆಯನ್ನು ಬಯಸುತ್ತದೆ. ನಮ್ಮ ಸಮಾಜವನ್ನು ಒಂದು ಮರಳು ದಿಬ್ಬಕ್ಕೆ ಹೋಲಿಸಬಹುದು. ಬಿರುಗಾಳಿ ಬೀಸಿದಾಗ ದಿಬ್ಬದ ಮರಳುಕಣಗಳು ಚೆಲ್ಲಾಪಿಲ್ಲಿಯಾಗುವಂತೆ, ನಮ್ಮ ಸಮಾಜದಲ್ಲಿರುವ ವಿವಿಧ ಹಿತಾಸಕ್ತಿಗಳು, ಸ್ವಾರ್ಥಸಾಧನೆಗಾಗಿ ಸಮಾಜವನ್ನು ಕಣ ಕಣವಾಗಿ ಒಡೆಯುತ್ತಾಯಿವೆ.

ನಾನು ಎಲ್ಲರಿಗಾಗಿ, ಎಲ್ಲರೂ ನನಗಾಗಿ ಎಂಬ ಭಾವನೆ ಸಮಾಜದಲ್ಲಿ ಬೆಳೆಯಲು ಅಡ್ಡಿಯಾಗಿರುವ ಜಾತಿ, ಮತ, ಮೇಲು-ಕೀಳು, ದುಡಿಯುವವನು-ದುಡಿಸಿಕೊಳ್ಳುವವನು, ಶೋಷಕ-ಶೋಷಿತ ಎಲ್ಲ ವಿಧದ ಭೇದಗಳನ್ನು ತೊಲಗಿಸಲು, ಸಾಮಾಜಿಕ ಕ್ರಾಂತಿ ಆಗಬೇಕಾಗಿದೆ.

ರಾಜಕೀಯ ಕಲುಷಿತಗೊಂಡಿದೆ. ಸ್ವಹಿತಸಾಧಕರು ನಮ್ಮ ಪ್ರತಿನಿಧಿಗಳಾಗಿ ಪಾರ್ಲಿಮೆಂಟಿಗೆ, ಶಾಸನಸಭೆಗಳಿಗೆ ಆರಿಸಿ ಬರುತ್ತಿದ್ದಾರೆ. ಈ ದುಷ್ಟಪ್ರವೃತ್ತಿಯನ್ನು ತಡೆಗಟ್ಟುವ ಇಚ್ಛಾಶಕ್ತಿ ಆಳುವ ಸರ್ಕಾರಗಳಿಗೂ ಇಲ್ಲ, ವಿರೋಧ ಪಕ್ಷಗಳಿಗೂ ಇಲ್ಲ. ಎಲ್ಲಾ ರಾಜಕೀಯ ಪಕ್ಷಗಳೂ ಲೋಕಸಭೆಯಲ್ಲಿ ಪ್ರಾಂತೀಯ ವಿಧಾನಸಭೆಗಳಲ್ಲಿ ತಮ್ಮ ಸಂಖ್ಯೆಯನ್ನು ಬೆಳಸಿಕೊಳ್ಳುವ ಏಕೈಕ ಉದ್ದೇಶದಿಂದ ಗೆಲ್ಲುವ ಕುದುರೆಗೇ ಪ್ರಾತಿನಿಧ್ಯ

ನೀಡುವ ಪರಿಪಾಠ ಬೆಳಸಿಕೊಂಡಿದ್ದಾರೆ.

ಈ ಪ್ರವೃತ್ತಿಯನ್ನು ತಡೆಗಟ್ಟದೆ ಹೋದರೆ ಮುಂದೆ ನಮ್ಮ ಸರ್ಕಾರಗಳನ್ನು ಈ ಬಗೆಯ ಸಮಾಜಘಾತುಕರೇ ಮುಂದೆ ಆಳುವವರಾಗುತ್ತಾರೆ. ಪ್ರಜಾಪ್ರಭುತ್ವಕ್ಕೆ ಗಂಡಾಂತರ ಸಂಭವಿಸಲಿದೆ.

ಆದ್ದರಿಂದ ಚುನಾವಣೆ ನಿಯಮಗಳಲ್ಲಿ ಮೂಲಭೂತ ಬದಲಾವಣೆ ತಂದು, ಚಾರಿತ್ರ್ಯವಾನ್‌ಗಳು ನಮ್ಮ ಪ್ರತಿನಿಧಿಗಳಾಗಿ ಆರಿಸಿ ಬರಲು ಅನುವುಮಾಡಿಕೊಡಬೇಕು.

ಜನತಾ ಚಳುವಳಿ ನಡೆಸಿ, ಈ ಸುಧಾರಣೆಯನ್ನು ಜಾರಿಗೆ ತರುವುದು ಕೂಡಲೇ ಆಗಬೇಕಾಗಿದೆ. ಜೆಪಿಯವರ ಸಂಪೂರ್ಣಕ್ರಾಂತಿಯ ಪ್ರಮುಖ ಗುರಿಯಾದರೂ ಇದೇ ಆಗಿದೆ.

ಶಿಕ್ಷಣದಲ್ಲಿ ಶಿಸ್ತಿಗೆ, ಚಾರಿತ್ರ್ಯಕ್ಕೆ ಒತ್ತು ಕೊಡುತ್ತಿಲ್ಲ. ಹೀಗಾಗಿ ಶಿಕ್ಷಣ ಪಡೆದವರು ಪಶುಗಳಿಗಿಂತ ಹೀನಾಯವಾಗಿ ನಡೆದುಕೊಳ್ಳುತ್ತಾರೆ. ಮಾನವ ಮೌಲ್ಯಗಳನ್ನು ಬೆಳೆಸುವ ಶಿಕ್ಷಣ ದೊರಕುತ್ತಿಲ್ಲ. ಶಿಕ್ಷಣ ಪದ್ಧತಿಯಲ್ಲಿರುವ ಪ್ರಮುಖ ದೋಷ ಇದು.

ಜಾಗತೀಕರಣದ ಭರಾಟೆಯಲ್ಲಿ ನಮ್ಮ ಶಿಕ್ಷಣ ನೀತಿಯನ್ನು ಅಮೆರಿಕ ರೂಪಿಸುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಸರಕುಗಳ ಮಾರಟಕ್ಕೆ ನಮ್ಮ ಕಲಿತ ಹುಡುಗರನ್ನು ಬಳಸಿಕೊಳ್ಳುತ್ತಿವೆ. ಮಾರುಕಟ್ಟೆಯ ಆವಶ್ಯಕತೆಗಳನ್ನು ಪೂರೈಸಲು ಬೇಕಾದ ಶಿಕ್ಷಣ ವಿಧಾನವನ್ನೂ ರೂಪಿಸಿ ಅವನ್ನು ನಮ್ಮ ಸರ್ಕಾರಗಳ ಮುಖಾಂತರ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕಾಂಡೋಮ್‌ಗಳ ತಯಾರಿಕಾ ಸಂಸ್ಥೆ ತನ್ನ ವ್ಯಾಪಾರ ಬೆಳಸಿಕೊಳ್ಳುವ ದೃಷ್ಟಿಯಿಂದ ಹೈಸ್ಕೂಲ್, ಕಾಲೇಜ್ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಲೈಂಗಿಕ ಶಿಕ್ಷಣ ನೀಡುವ ಉದ್ದೇಶದಿಂದ ಈಗಾಗಲೇ ಹತ್ತಾರು ಕೋಟಿ ರೂಗಳನ್ನು ಕರ್ನಾಟಕ ಒಂದರಲ್ಲಿಯೇ ತೊಡಗಿಸಿದೆ. ಲೈಂಗಿಕ ಶಿಕ್ಷಣವನ್ನು ಬ್ರಹ್ಮಚಾರಿ ಬಾಲಕರಿಗೆ ಕೊಡುವ ರೀತಿ ಹೇಗೆಂದರೆ, ನೀವು ಲೈಂಗಿಕ ಕ್ರಿಯೆಯಲ್ಲಿ ತೊಡಗುವಾಗ ಕಾಂಡೋಮ್ ಬಳಸುವುದರಿಂದ ನಿಮಗೆ ಏಡ್ಸ್ ರೋಗ ತಗುಲುವುದಿಲ್ಲ. ಈ ಕಾಂಡೋಮ್ ಕಂಪನಿ ಹರೆಯದ ವಿದ್ಯಾರ್ಥಿಗಳಿಗೆ ಹೇಳಿಕೊಡುವುದೇನೆಂದರೆ, ನೀವು ಯಾವುದೇ ಹುಡುಗಿಯ ಜೊತೆಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಬಹುದು. ಅದಕ್ಕೆ ಅಡ್ಡಿಯಿಲ್ಲ, ಆದರೆ ಕಾಂಡೋಮ್ ಬಳಸಲು ಮರೆಯಬೇಡಿ!

ಈ ಕಾಂಡೋಮ್ ಭೂತ ಎಷ್ಟು ಬೆಳೆದಿದೆಯೆಂದರೆ, ಕ್ರಿಕೆಟ್‌ಮ್ಯಾಚ್ ನಡೆದಾಗ, ಪಂದ್ಯದ ವಿವರಗಳನ್ನು ಪತ್ರಿಕೆಗಳು ನೀಡುವುದರ ಜೊತೆ ಜೊತೆಗೇ, ಈ ಟೆಸ್ಟ್ ಪಂದ್ಯದ ಸಂದರ್ಭದಲ್ಲಿ ೫೦ಸಾವಿರ ಕಾಂಡೋಮ್‌ಗಳ ವ್ಯಾಪಾರ ನಡೆಯಿತು ಎಂದು ಪ್ರಚಾರ ನಡೆಸಲು ಮರೆಯುವುದಿಲ್ಲ. ನಮ್ಮ ಪಂಚತಾರಾ ಹೋಟೆಲ್‌ಗಳೆಲ್ಲ ವೇಶ್ಯಾವಾಟಿಕೆಗಳಾಗಿ ಪರಿವರ್ತನೆಯಾಗಿರುವುದಕ್ಕೆ ಸಾಕ್ಷಿ ಈ ಕಾಂಡೋಮ್ ಅವಾಂತರ. ಭಾರತೀಯರಾದ ನಾವು ಸರ್ಕಾರದ ಜೊತೆಗೆ ಹೋರಾಟ ಮಾಡುವುದರ ಜೊತೆ ಜೊತೆಗೇ ಅಮೆರಿಕಾ

ಮುಂತಾದ ದೇಶಗಳ ವಿರುದ್ಧವೂ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧವೂ ಕಾಂಡೋಮ್ ತಯಾರಕ ಸಂಸ್ಥೆಗಳ ವಿರುದ್ಧವೂ ಸಮರಸಾರಬೇಕಾದ ಅಗತ್ಯತೆ ಇದೆ.

ಆರ್ಥಿಕ ರಂಗದಲ್ಲಿ, ಕೈಗಾರಿಕಾ ರಂಗದಲ್ಲಿ ಇದಕ್ಕಿಂತ ಘನಘೋರವಾದ ಪರಿಸ್ಥಿತಿ ಉದ್ಭವವಾಗಿದೆ. ಭಾರತೀಯ ಸರ್ಕಾರಿ ಉದ್ಯಮಗಳು, ಖಾಸಗಿ ಹತ್ತಿಗಿರಣಿಗಳು, ಖಾಸಗೀ ವಲಯದ ಬೇರೆ ಬೇರೆ ಕಾರ್ಖಾನೆಗಳು ಮುಚ್ಚಿ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಈಗ ಇವುಗಳ ಸ್ಥಾನದಲ್ಲಿ ಬಹುರಾಷ್ಟ್ರೀಯ ಕಂಪನಿಗಳು, ಮೆಟ್ರೋ ಮುಂತಾದ ದೈತ್ಯ ಸಂಸ್ಥೆಗಳು ಹುಟ್ಟಿಕೊಂಡಿವೆ. ಇದರ ಜೊತೆಗೆ ಐ.ಟಿ. ಬಿ.ಟಿ. ಸಂಸ್ಥೆಗಳ ಆರ್ಭಟವೂ ಆರಂಭವಾಗಿದೆ. ಅಮೆರಿಕದ ಜನರ ಸೇವೆಗೆ ಭಾರತೀಯರನ್ನು ಬಳಸಲಾಗುತ್ತಿದೆ. ಹಿಂದೆ ದಕ್ಷಿಣ ಆಫ್ರಿಕಾದ ಬಿಳಿಯರ ತೋಟಗಳಿಗೆ, ಕಬ್ಬಿನ ಗದ್ದೆಗಳಿಗೆ ಇಂಗ್ಲಿಷ್ ಸರ್ಕಾರ ಭಾರತೀಯರನ್ನು ಒತ್ತೆಯಾಳುಗಳನ್ನಾಗಿ ಪರಿಗಣಿಸಿ ಭಾರತದಿಂದ ರವಾನಿಸುತ್ತಿದ್ದ ರೀತಿಯಲ್ಲಿ ಇಂದು ವಿದ್ಯಾವಂತ ಯುವಕರನ್ನು ಭಾರತದಿಂದಲೇ ಅಮೆರಿಕನ್ ಕಂಪನಿಗಳ ಗುಲಾಮರಾಗಿ ದುಡಿಯಲು ಬಳಸುತ್ತಿರುವುದನ್ನು ಕಾಣುತ್ತೇವೆ.

ನಮ್ಮ ನೆಲ, ಜಲ, ಸಂಪತ್ತುಗಳನ್ನೆಲ್ಲಾ ವಿದೇಶಿ ಕಂಪನಿಗಳಿಗೆ ನಮ್ಮ ಸರ್ಕಾರಗಳೂ ಬಳುವಳಿಯಾಗಿ ನೀಡಿರುವುದಲ್ಲದೆ, ಅವರಿಗೆ ತೆರಿಗೆ ವಿನಾಯಿತಿ ಮುಂತಾದ ಸೌಲಭ್ಯಗಳನ್ನೂ ಕಲ್ಪಿಸಿಕೊಡಲಾಗಿದೆ.

ಈಸ್ಟ್ ಇಂಡಿಯಾ ಕಂಪನಿ ನಮ್ಮ ಅರಳೆಯನ್ನು ಬ್ರಿಟನ್ನಿಗೆ ಕೊಂಡುಹೋಗಿ ಅಲ್ಲಿ ಬಟ್ಟೆ ತಯಾರಿಸಿ ತಂದು ಭಾರತೀಯರ ಮೇಲೆ ಹೇರಿದಾಗ ಗಾಂಧೀಜಿಯವರು ಇಂದು ತಾವು ತಯಾರಿಸಿದ ಬಟ್ಟೆಯನ್ನು ನಮ್ಮ ಮೇಲೆ ಹೇರುತ್ತಿದ್ದಾರೆ. ಅವರ ಈ ವ್ಯಾಪಾರವನ್ನು ಕೂಡಲೆ ತಡೆಯಲಿಲ್ಲವಾದರೆ ಅವರು ಅನತಿಕಾಲದಲ್ಲಿ ಯಂತ್ರ ಸಮೇತ ಭಾರತಕ್ಕೆ ಬಂದು ಝೂಂಡಾ ಹೂಡುತ್ತಾರೆ. ಆದ್ದರಿಂದ ನಾವು ವಿದೇಶಿ ವಸ್ತುಗಳನ್ನೇ ಬಹಿಷ್ಕಾರಹಾಕಬೇಕು. ಅವನ್ನು ಸುಟ್ಟು ಹಾಕಬೇಕು ಎಂದು ಚಳುವಳಿ ನಡೆಸಿದರು. ಸ್ವದೇಶಿ, ಸ್ವಾವಲಂಬನೆಗಳಿಗೆ ಒತ್ತುಕೊಟ್ಟರು. ಸ್ವಾತಂತ್ರ್ಯಾನಂತರದ ಭಾರತ ಸರ್ಕಾರವಾದರೋ ಸಾವಿರಾರು ಕಂಪನಿಗಳನ್ನು ಬರಮಾಡಿಕೊಂಡಿದೆ. ಒಂದು ಬ್ರಿಟಿಷ್ ಕಂಪನಿ ಈ ದೇಶಕ್ಕೆ ವ್ಯಾಪಾರದ ನೆಪದಲ್ಲಿ ಬಂದು ನಮ್ಮನ್ನು ೨೦೦ ವರ್ಷಗಳ ಕಾಲ ಗುಲಾಮಗಿರಿಗೆ ತಳ್ಳಿತು. ಇಂದು ನಾವು ಸಾವಿರಾರು ವಿದೇಶಿ ಕಂಪನಿಗಳನ್ನು ಯಂತ್ರ ಸಮೇತ ಬರಮಾಡಿಕೊಳ್ಳುತ್ತಿದ್ದೇವೆ. ಇದರ ಪರಿಣಾಮವಾಗಿ ಇನ್ನೂ ಕೆಲವೇ ವರ್ಷಗಳಲ್ಲಿ ಭಾರತ ಇತರ ರಾಷ್ಟ್ರಗಳ ಆರ್ಥಿಕ ಗುಲಾಮಗಿರಿಗೆ ಸಜ್ಜಾಗುವ ಸಂಭವವಿದೆ.

ಆದ್ದರಿಂದ ನಾವು ಈ ಆರ್ಥಿಕ ಗುಲಾಮಗಿರಿಯ ವಿರುದ್ಧವಾಗಿ ಈ ಕೂಡಲೆ ಸಮರ ಘೋಷಿಸುವುದು ಅನಿವಾರ್ಯ. ಜಯಪ್ರಕಾಶ್ ನಾರಾಯಣರ ಸಮಗ್ರ ಕ್ರಾಂತಿಯ ಪರಿಕಲ್ಪನೆಯಲ್ಲಿ ಈ ಎಲ್ಲಾ ಅಂಶಗಳೂ ಅಡಕವಾಗಿವೆ.

***

ಪುಸ್ತಕ ವಿಚಾರ

೧) ಪುಸ್ತಕದ ಹೆಸರು : **ಮುಗಿಯದ ಪಯಣ**
ಲೇಖಕರು : ಜಿ.ಟಿ. ನಾರಾಯಣರಾವ್
ಪ್ರಕಾಶಕರು : ಅತ್ರಿ ಬುಕ್ ಸೆಂಟರ್,ಮಂಗಳೂರು -೦೧
ಬೆಲೆ : ೧೨೦ ರೂ

ಈ ಪುಸ್ತಕದ ಲೇಖಕರಾದ ಜಿ.ಟಿ. ನಾರಾಯಣರಾವ್‌ರವರು ಓರ್ವ ವಿಜ್ಞಾನಿ. ಕನ್ನಡ ಅಭಿಮಾನಿ ಮತ್ತು ಓರ್ವ ಚಿಂತಕ. ಇಂದಿನ ಯುವ ಪೀಳಿಗೆಗೆ ಆದರ್ಶಪ್ರಾಯರು. ಜೀವನದ ಅನೇಕ ಸ್ತರಗಳ ಅನುಭವವನ್ನು ಪಡೆದಿರುವಂಥ ನಾರಾಯಣರಾವ್‌ರವರು ಈ ಪುಸ್ತಕದಲ್ಲಿ ತಮ್ಮ ಜೀವನದ ಬಹುಮುಖಿ ಅನುಭವಗಳನ್ನು ಬಹಳ ಸಾರವತ್ತಾಗಿ ವಿವರಿಸಿದ್ದಾರೆ. ೬೪ ವಿವಿಧ ಬಗೆಯ ಶೀರ್ಷಿಕೆಗಳಲ್ಲಿ ತಮ್ಮ ಜೀವನದ ಅನುಭವಗಳನ್ನು ಅಲೆಅಲೆಯಾಗಿ ಮನಸೂರೆಗೊಳ್ಳುವಂತೆ ಬಿಚ್ಚಿಟ್ಟಿದ್ದಾರೆ.

೨) ಪುಸ್ತಕದ ಹೆಸರು : **ಗಾಂಧೀಜಿ ಬದುಕು-ಬರಹ**
ಲೇಖಕರು : ಪಿ.ಎಸ್. ಚಂದ್ರಣ್ಣ
ಪ್ರಕಾಶಕರು : ಸಂವಹನ,ಶಿವರಾಂಪೇಟೆ,ಮೈಸೂರು-೧೦
ಬೆಲೆ : ೧೫೦ ರೂ

ಗಾಂಧೀಜಿಯವರನ್ನು ಕುರಿತು ವಿಪುಲವಾದ ಸಾಹಿತ್ಯ ಸೃಷ್ಟಿಯಾಗಿದೆ ಮತ್ತು ಸೃಷ್ಟಿಯಾಗುತ್ತಲೇ ಇದೆ. ಗಾಂಧಿ ಸಾಹಿತ್ಯ ಸಾಗರದ ಒಡಲೊಳಗಿರುವ ರತ್ನವನ್ನು ಪಡೆಯುವುದು ಇಂದಿನ ಯುವಕರಿಗೆ ಕಷ್ಟವಾಗಬಹುದು. ಆ ಕಷ್ಟವನ್ನು ನಿವಾರಿಸುವ ದೊಡ್ಡ ಕೆಲಸವನ್ನು ಶ್ರೀ ಚಂದ್ರಣ್ಣನವರು ಮಾಡಿದ್ದಾರೆ. ೨೮೦ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ಗಾಂಧೀಜಿಯವರ ವಿಚಾರಗಳು ಸುಲಭವಾಗಿ ಕೈಗೆಟುಕುವಂತೆ ಮಾಡಿದ್ದಾರೆ. ಇಂಥ ಒಂದು ಆಕರ ಗ್ರಂಥ ಕನ್ನಡದಲ್ಲಿ ಪಡೆಯಬೇಕೆಂದವರಿಗೆ ಬಹಳ ಅನುಕೂಲಕರವಾಗಿ ಒದಗಿ ಬಂದಿದೆ.

ಸಂಪೂರ್ಣಕ್ರಾಂತಿಯ ಒಂದು ಸಾಮಾನ್ಯ ಪರಿಚಯ

– ಡಿ.ಎಸ್. ನಾಗಭೂಷಣ್

ಜಯಪ್ರಕಾಶ್ ನಾರಾಯಣರು ೧೯೭೪, ಜೂನ್ ೫ರಂದು ಪಾಟ್ನಾದ ಗಾಂಧಿ ಮೈದಾನದಲ್ಲಿ ಬೃಹತ್ ಸಭೆ ಆಯೋಜಿಸಿ ಬಿಹಾರದ ವಿದ್ಯಾರ್ಥಿ ಆಂದೋಲನಕ್ಕೆ ಒಂದು ಸ್ಪಷ್ಟ ದಿಕ್ಕು ಹಾಗೂ ಕಾರ್ಯಕ್ರಮ ಒದಗಿಸುವ ತೀರ್ಮಾನ ಕೈಗೊಂಡರು. ಜೂನ್ ೨ರಂದು ತಮ್ಮ ಪ್ರಾಸ್ಟೇಟ್ ಗ್ರಂಥಿಯ ಯಶಸ್ವೀ ಚಿಕಿತ್ಸೆಯ ನಂತರ ತಮಿಳುನಾಡಿನಿಂದ ಪಾಟ್ನಾಕ್ಕೆ ವಾಪಸಾದರು. ಮಾರನೇ ದಿನವೇ ಭಾರತದ ಕಮ್ಯೂನಿಸ್ಟ್ ಪಕ್ಷ (ಸಿ.ಪಿ.ಐ) ಹಾಗೂ ಕಾಂಗ್ರೆಸ್ ಜೊತೆಗೂಡಿ ಬಿಹಾರ ವಿದ್ಯಾರ್ಥಿ ಆಂದೋಲನದ ವಿರುದ್ಧ ಹಾಗೂ ರಾಜ್ಯಸರ್ಕಾರದ ಪರವಾಗಿ ಶಸ್ತ್ರಸಜ್ಜಿತರಾಗಿ ಬಂದಿದ್ದ ಸಂತಾಲ್ ಬುಡಕಟ್ಟಿನವರನ್ನೊಳಗೊಂಡ ಬೃಹತ್ ಪ್ರದರ್ಶನವನ್ನು ಆಯೋಜಿಸಿ, ಜಯಪ್ರಕಾಶರು ಆಯೋಜಿಸಿದ್ದ ಸಾರ್ವಜನಿಕ ಸಭೆಯ ಬಗ್ಗೆ ಆತಂಕವನ್ನು ಸೃಷ್ಟಿಸಿದರಾದರೂ, ಆಗಲೆ ವಿದ್ಯಾರ್ಥಿಗಳು, ಶಿಕ್ಷಕರು, ವಕೀಲರು, ಲೇಖಕರು, ಸರ್ಕಾರಿ ನೌಕರರು ಮುಂತಾದ ಎಲ್ಲ ಜನವರ್ಗಗಳ ಬೆಂಬಲ ಗಳಿಸುವ ಮೂಲಕ ಜನಾಂದೋಲನವಾಗಿ ಪರಿವರ್ತಿತವಾಗಿದ್ದ ವಿದ್ಯಾರ್ಥಿ ಆಂದೋಲನ ಇದರಿಂದ ಸ್ವಲ್ಪವೂ ವಿಚಲಿತವಾಗಲಿಲ್ಲ.

ಜೂನ್ ೫ರಂದು ರಾಜ್ಯ ಪೋಲೀಸರು ಹಾಗೂ ಜಿಲ್ಲಾಡಳಿತವು ಪಾಟ್ನಾಕ್ಕೆ ಬರುವ ಎಲ್ಲ ಮಾರ್ಗಗಳಿಗೂ ಅಡ್ಡಿಯುಂಟುಮಾಡಿ ರೈಲು ಬಸ್ ಹಾಗೂ ದೇಶಗಳ ಸಂಚಾರವನ್ನು ವ್ಯತ್ಯಸ್ತಗೊಳಿಸಿದರೂ, ರಾಜ್ಯದ ವಿವಿಧ ಭಾಗಗಳಿಂದ ಲಕ್ಷಾಂತರ ಜನ ರಾಜ್ಯದ ರಾಜಧಾನಿಯಲ್ಲಿ ಸೇರುವಂತೆ ಮಾಡಿ ಛಾತ್ರ ಸಂಘರ್ಷ ಸಮಿತಿಯು ತನ್ನ ಸಂಘಟನಾ ಚಾತುರ್ಯವನ್ನು ಪ್ರದರ್ಶಿಸಿತು. ಜಯಪ್ರಕಾಶರು ತಮ್ಮ ಸಂಗಡಿಗರೊಡನೆ ಜೀಪ್‌ನಲ್ಲಿ ರಾಜಭವನಕ್ಕೆ ತೆರಳಿ, ತಮ್ಮೊಡನೆ ಒಂದು ಟ್ರಕ್ ತುಂಬಾ ತುಂಬಿಕೊಂಡು ಬಂದಿದ್ದ ಬಿಹಾರದ ಲಕ್ಷಾಂತರ ಜನರ ಸಹಿಗಳನ್ನೊಳಗೊಂಡ, ಸರ್ಕಾರದಲ್ಲಿ ಅವಿಶ್ವಾಸ ವ್ಯಕ್ತಪಡಿಸುವ ದಾಖಲೆಪತ್ರಗಳನ್ನು ರಾಜ್ಯಪಾಲ ಆರ್.ಡಿ. ಭಂಡಾರೆ ಅವರಿಗೆ ಒಪ್ಪಿಸಿ, ಸರ್ಕಾರವನ್ನು ವಜಾಮಾಡಿ ವಿಧಾನ ಸಭೆಯನ್ನು ವಿಸರ್ಜಿಸುವಂತೆ ಕೋರಿದರು.

ನಂತರ ಗಾಂಧಿ ಮೈದಾನದಲ್ಲಿ ೫ಲಕ್ಷ ಜನರ ಸಾರ್ವಜನಿಕ ಸಭೆ. ಸಭೆಗೆ ಆಗಮಿಸುತ್ತಿದ್ದ ಜನರ ಭಾರಿ ಗುಂಪೊಂದರ ಮೇಲೆ ಇಂದಿರಾ ಬ್ರಿಗೇಡ್ ಎಂಬ ಕಾಂಗ್ರೆಸ್ ಶಾಸಕನೊಬ್ಬನ ನೇತೃತ್ವದ ಗುಂಪೊಂದು ಗುಂಡು ಹಾರಿಸಿ ಹತ್ತಾರು ಜನರನ್ನು ಗಾಯಗೊಳಿಸಿದ ಪ್ರಚೋದನೆಯ ಹೊರತಾಗಿಯೂ ಅತ್ಯಂತ

ಶಿಸ್ತು, ಸಂಯಮ ಹಾಗೂ ಶಾಂತಿಯನ್ನು ಪ್ರದರ್ಶಿಸಿದ ಬೃಹತ್ ಜನಸ್ತೋಮ ಜಯಪ್ರಕಾಶರ ಐತಿಹಾಸಿಕ ಭಾಷಣವನ್ನು ಮಧ್ಯೆ ಮಧ್ಯೆ 'ಲೋಕನಾಯಕ ಜಯಪ್ರಕಾಶ್ ನಾರಾಯಣ್ ಜಿಂದಾಬಾದ್' ಎಂಬ ಮುಗಿಲು ಮುಟ್ಟುತ್ತಿದ್ದ ಘೋಷಣೆಗಳಿಂದ ಮಾತ್ರ ಬಿರಿಯುತ್ತಿದ್ದ ಮಹಾಮೌನದೊಂದಿಗೆ ಆಲಿಸಿತು. ತಮ್ಮ ಇಡೀ ಜೀವನದುದ್ದಕ್ಕೂ ನಡೆಸಿಕೊಂಡು ಬಂದ ಹೋರಾಟ, ರಚನಾತ್ಮಕ ಕಾರ್ಯಕ್ರಮಗಳ ಅವಲೋಕನ ಮಾಡುತ್ತಾ ಅವರು ಹೇಳಿದರು: "ನಿಮ್ಮ ಮುಂದೀಗ ಕ್ರಾಂತಿಕಾರಿ ಕಾರ್ಯಕ್ರಮವೊಂದನ್ನು ಮುಂದಿಡುತ್ತಿದ್ದೇನೆ. ಇದು ಸುಲಭದ ಕಾರ್ಯಕ್ರಮವಲ್ಲ. ೧೯೪೨ರ ಚಳುವಳಿಯಂತೆಯೇ ಇದು ಕೂಡಾ. ಸಿಟ್ಟಿಗೆ ಒಳಗಾಗದೆ, ಹೇಡಿತನಕ್ಕೆ ಈಡಾಗದೆ ಲಾಠಿ, ಗುಂಡೇಟು, ಸೆರೆವಾಸಗಳನ್ನು ಎದುರಿಸಬೇಕಾದ ತ್ಯಾಗ-ಸಾಹಸಗಳ ಕಾರ್ಯಾಚರಣೆ ಇದು. ಇದು ಕ್ರಾಂತಿ ಗೆಳೆಯರೇ, ಸಂಪೂರ್ಣಕ್ರಾಂತಿ. ವಿಧಾನಸಭೆ ವಿಸರ್ಜನೆಯೊಂದಿಗೆ ಕೊನೆಗೊಳ್ಳುವ ಕ್ರಾಂತಿ ಇದಲ್ಲ. ೨೭ ವರ್ಷಗಳ ಸ್ವಾತಂತ್ರ್ಯದ ನಂತರವೂ ಜನ ಹಸಿವು, ಬಡತನ, ನಿರುದ್ಯೋಗ, ಬೆಲೆ ಏರಿಕೆ, ಭ್ರಷ್ಟಾಚಾರಗಳಿಂದ ನರಳಬೇಕಾಗಿರುವ ವ್ಯಗ್ರ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಬದಲಾಯಿಸಲು ಹೊರಟಿರುವ ಕ್ರಾಂತಿ ಇದು..........."

ಒಂದು ತಾಸಿಗೂ ಹೆಚ್ಚು ಕಾಲ ಮಾತಾಡಿದ ಜಯಪ್ರಕಾಶರು ಸಭೆಯ ಕೊನೆಯಲ್ಲಿ ಈ ಆಂದೋಲನದ ಮುಂದಿರುವ ಗುರಿಗಳನ್ನು ನಿರೂಪಿಸಿದರು- ವಿಧಾನಸಭೆಯ ವಿಸರ್ಜನೆ, ಸರ್ಕಾರವನ್ನು ಪ್ರದರ್ಶನ, ಮುಷ್ಕರ, ಬಂದ್‌ಗಳ ಮೂಲಕ ನಿಷ್ಕ್ರಿಯಗೊಳಿಸುವುದು, ತೆರಿಗೆ ಕೊಡಲು ನಿರಾಕರಿಸುವುದು, ಶಾಲಾ ಕಾಲೇಜುಗಳನ್ನು ಒಂದು ವರ್ಷ ಮುಚ್ಚಿ ಜನ ಸಂಘಟನೆ ಮಾಡುವುದು, ಸಮಾಜದಲ್ಲಿ ನೈತಿಕ ಮೌಲ್ಯಗಳನ್ನು ಉದ್ದೀಪಿಸುವುದು.

ಸಭೆ ಮುಗಿಯುತ್ತಿದ್ದಂತೆ ಎಲ್ಲಿಂದಲೋ ಬಂದ ಬಿರುಗಾಳಿ ಇಡೀ ಗಾಂಧಿ ಮೈದಾನವನ್ನು ಧೂಳಿನಲ್ಲಿ ಮುಚ್ಚಿತು; ಚಪ್ಪರ-ಚಾವಡಿಗಳು ಮುರಿದುಬಿದ್ದವು. ಜನ ದಿಕ್ಕಾಪಾಲಾಗಿ ಓಡಿದರು. ಕಾರ್ಮುಗಿಲು ದಟ್ಟೈಸಿ ಬಿರುಮಳೆ ಝಾಡಿಸಲಾರಂಭಿಸಿತು. ಮಹಾ ಬಿರುಗಾಳಿಯೊಂದು ನಿಜವಾಗಿ ಆರಂಭವಾಗಿತ್ತು.

ಜಯಪ್ರಕಾಶರು ಗಾಂಧಿ ಮೈದಾನದಲ್ಲಿ ಪ್ರಸ್ತಾಪಿಸಿದ ಸಂಪೂರ್ಣಕ್ರಾಂತಿಯ ಕಲ್ಪನೆಯನ್ನು ಮೊದಲ ಬಾರಿಗೆ ವಿಷದಪಡಿಸಿದ್ದು ೭೪ರ ಜೂನ್ ೨೨ರಂದು ಅಲಹಾಬಾದ್‌ನಲ್ಲಿ ತರುಣ ಶಾಂತಿಸೇನೆ ಆಯೋಜಿಸಿದ್ದ ಅಖಿಲ ಭಾರತ ಯುವಸಮ್ಮೇಳನದಲ್ಲಿ. ಅವರು ಪ್ರತಿಪಾದಿಸಿದ ಸಂಪೂರ್ಣ ಕ್ರಾಂತಿ ಭೂದಾನ- ಗ್ರಾಮದಾನ ಚಳುವಳಿಗಳ ಮೂಲಕ ಮಾಡುತ್ತಿದ್ದ ಸರ್ವೋದಯ ಕಾರ್ಯಕ್ರಮಗಳನ್ನೇ ಅಲ್ಲದೆ 'ಪ್ರಜಾಪ್ರಭುತ್ವಕ್ಕಾಗಿ ಪ್ರಜೆಗಳು' ವೇದಿಕೆಯ ಪ್ರಣಾಳಿಕೆಯ

ಸಾರ್ವತ್ರಿಕ ಗುರಿಗಳನ್ನೂ ಒಳಗೊಂಡಿತ್ತು. ಅಹಿಂಸೆಯ ಆಧಾರದ ಮೇಲೆ ಜನಶಕ್ತಿಯನ್ನು ಸಂಘಟಿಸುವ ಮೂಲಕ-ರಾಜಕಾರಣಿ, ಅಧಿಕಾರಿ ಹಾಗೂ ವ್ಯಾಪಾರಿಗಳ ಭ್ರಷ್ಟಾಚಾರದ ಜೊತೆಗೆ ಧರ್ಮಾಂಧತೆ-ಜಾತ್ಯಾಂಧತೆಗಳನ್ನೂ ನಿರ್ಮೂಲನ ಮಾಡುವ, ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಸಂರಕ್ಷಿಸಲು ಚುನಾವಣಾ ಸುಧಾರಣೆಗಳನ್ನು ಮತ್ತು ಸಮಾಜಸೇವೆಯನ್ನು ಅವಿಭಾಜ್ಯ ಭಾಗವಾಗಿ ಹೊಂದಿರುವ ವೃತಿಪರ ಶಿಕ್ಷಣ ಆಧಾರಿತ ಸರ್ವಸಾಮಾನ್ಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುವ-ಮೂಲಭೂತ ಪರಿವರ್ತನೆಯ ಉದ್ದೇಶ ಇದರದ್ದು. ಈ ಸಂದರ್ಭದಲ್ಲಿ ಅವರು "ಇಂತಹ ಮಹಾಪರಿವರ್ತನೆಯ ಸಂಧಿಕಾಲ ಈಗ ಒದಗಿ ಬಂದಿದೆ; ಮತ್ತೊಂದು 'ಮಾಡಿ ಇಲ್ಲವೇ ಮಡಿ' ಚಳುವಳಿಗೆ ದೇಶ ಸಿದ್ಧವಾಗಿರುವುದು ನನ್ನ ಅರಿವಿಗೆ ಬರುತ್ತಿದೆ. ಜನರ ಹತಾಶೆ ಹಾಗೂ ಜಿಗುಪ್ಸೆಗಳನ್ನು ನಾವೀಗ ರಚನಾತ್ಮಕ ಮಾರ್ಗದ ಕಡೆ ತಿರುಗಿಸಿ ಅವರನ್ನು ಅಂಘಟಿಸದೇ ಹೋದರೆ ದೇಶ ಸರ್ವಾಧಿಕಾರಕ್ಕೆ ಸಿಕ್ಕುವುದು ಖಂಡಿತ. ನನಗಾಗಿ ನೀವು ಒಂದು ವರ್ಷ ಶಾಲಾ ಕಾಲೇಜು ಬಿಟ್ಟು ಬನ್ನಿ...."ಎಂದು ಯುವಜನತೆಗೆ ಕರೆಕೊಟ್ಟರು. ತಮ್ಮ ಸಂಪೂರ್ಣಕ್ರಾಂತಿ ಆದೇಶದ ಮೇಲೆ ನಡೆಯುವ ಕ್ರಾಂತಿಯಲ್ಲವಾದ್ದರಿಂದ ಅದು ಜನರ ಮಧ್ಯೆ ವಿಕಾಸಗೊಳ್ಳುವ ಸಂದರ್ಭದಲ್ಲೇ ತನ್ನ ನಿರ್ದಿಷ್ಟ ರೂಪ ಪಡೆದುಕೊಳ್ಳುವ ಅಶಯ ಹೊಂದಿದೆ ಎಂದೂ; ಹಾಗಾಗಿಯೇ ಇದರ ಪರಿಕಲ್ಪನೆ ಪೂರ್ವಸಿದ್ಧ ವಿವರಗಳ ನಿರೂಪಣೆಗೆ ಸಿಗಲಾರದೆಂದೂ ಅವರು ವಿವರಿಸಿದರು.

ಜಯಪ್ರಕಾಶರು ಜುಲೈ೨ರಂದು ಪಾಟ್ನಾ ಸೆರಮನೆಗೆ ಭೇಟಿನೀಡಿ ಬಂಧಿತರಾಗಿದ್ದ ನೂರಾರು ವಿದ್ಯಾರ್ಥಿ ನಾಯಕರೊಂದಿಗೆ ಮಾತುಕತೆ ನಡೆಸಿದರು. ಅಂದೇ ಸಂಪೂರ್ಣಕ್ರಾಂತಿ ಪರಿಕಲ್ಪನೆಯ ಪ್ರಚಾರಕ್ಕಾಗಿ ಹದಿಮೂರು ಜನರ ಸಮಿತಿಯೊಂದನ್ನು ರಚಿಸಿ, ಅದರ ಜಾರಿಗಾಗಿ ಪ್ರತಿ ಗ್ರಾಮ ಪಂಚಾಯತ್ ಮಟ್ಟದಲ್ಲೂ ಜನಸಂಘರ್ಷ ಸಮಿತಿಗಳನ್ನು ಸಂಘಟಿಸುವ ತೀರ್ಮಾನ ಕೈಗೊಂಡರು. ಇದಕ್ಕಾಗಿ ವಿದ್ಯಾರ್ಥಿಗಳನ್ನು ಮತ್ತು ತರುಣಶಾಂತಿ ಸೇನೆಯ ಹಾಗೂ ಸರ್ವೋದಯ ಕಾರ್ಯಕರ್ತರನ್ನು ನಿಯೋಜಿಸಲಾಯಿತು. ಆದರೆ ಸರ್ವೋದಯ ಕಾರ್ಯಕರ್ತರನ್ನು ಹೀಗೆ 'ಸಂಘರ್ಷ' ಕಾರ್ಯಕ್ರಮಗಳಲ್ಲಿ ತೊಡಗಿಸುವುದು ಸರ್ವೋದಯ ಚಳುವಳಿಯ ಚೌಕಟ್ಟನ್ನು ಉಲ್ಲಂಘಿಸುತ್ತದೆ ಎಂದು ವಿನೋಬಾ ಭಾವಿಸಿದ್ದಾರೆ ಎಂಬ ಸುದ್ದಿ ಹರಡಿ, ಜಯಪ್ರಕಾಶರು ಜುಲೈ ೮ ರಂದು ವಿನೋಬಾರೊಂದಿಗೆ ಮಾತುಕತೆಗಾಗಿ ಪೌನಾರ್ ಆಶ್ರಮಕ್ಕೆ ತೆರಳಿದರು. ಸರ್ವೋದಯ ಚಳುವಳಿಯ ಸಾಂಸ್ಥಿಕ ರೂಪದಂತಿದ್ದ ಸರ್ವ ಸೇವಾ ಸಂಘದ ವ್ಯವಸ್ಥಾಪಕ ಸಮಿತಿಯ ಸಭೆಯನ್ನೂ ಕರೆಯಲಾಯಿತು. ಸರ್ವೋದಯ ಚಳುವಳಿ ಎಲ್ಲರ ಸಹಕಾರದಿಂದ ಯಶಸ್ವಿಯಾಗಬೇಕಾಗಿರುವುದರಿಂದ ಸರ್ಕಾರವೂ ಸೇರಿದಂತೆ

ಯವರೊಂದಿಗೂ ಸಂಘರ್ಷದಲ್ಲಿ ತೊಡಗದೆ ಪ್ರೇಮದಿಂದ ಕಾರ್ಯಸಾಧಿಸಬೇಕಾಗುತ್ತದೆಂದು ವಿನೋಬಾ ವಾದಿಸಿದರೆ, ಪ್ರೇಮದಿಂದ ಸಾಧಿಸಲಾಗದನ್ನು ಅಹಿಂಸಾತ್ಮಕ ಸಂಘರ್ಷದ ಮೂಲಕ ಸಾಧಿಸಬೇಕಾದದ್ದು ಹೊಸ ಕಾಲದ ಅನಿವಾರ್ಯತೆ ಎಂದು ಜಯಪ್ರಕಾಶರು ವಾದಿಸಿದರು. ವ್ಯವಸ್ಥಾಪಕ ಸಮಿತಿಯ ಬಹುಪಾಲು ಸದಸ್ಯರೂ ಜಯಪ್ರಕಾಶರನ್ನು ಬೆಂಬಲಿಸಿದರು. ಇದನ್ನು ಮನಗಂಡ ವಿನೋಬಾರು ಜಯಪ್ರಕಾಶರ ಆಂದೋಲನದಲ್ಲಿ ಭಾಗವಹಿಸುವ ಆಯ್ಕೆಯ ಪ್ರಶ್ನೆಯನ್ನು ಸಂಬಂಧಪಟ್ಟ ಕಾರ್ಯಕರ್ತರ ಆತ್ಮಸಾಕ್ಷಿಗೇ ಬಿಟ್ಟುಬಿಡಬಹುದೆಂಬ ತೀರ್ಮಾನ ನೀಡಿದರು. "ಆಂದೋಲನ ಯಶಸ್ವಿಯಾದರೆ ಒಳ್ಳೆಯದೆಂದು ಭಾವಿಸೋಣ. ವಿಫಲವಾದರೆ ಅದನ್ನೊಂದು ಪಾಠವೆಂದು ಭಾವಿಸೋಣ" ಎಂಬುದು ಅವರ ಕೊನೆಯ ಅಂಬೋಣವಾಯಿತು. ನಂತರ ಅವರು ಒಂದು ವರ್ಷದ 'ಮೌನವ್ರತ' ಘೋಷಿಸಿದರು. ಇದರಿಂದ ಸ್ಫೂರ್ತಿಗೊಂಡ ಸರ್ವೋದಯ ಕಾರ್ಯಕರ್ತರು ಬಿಹಾರದ ಸಂಪೂರ್ಣ ಕ್ರಾಂತಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು.

೧೯೭೪ರ ಜುಲೈ ಮಧ್ಯಭಾಗದ ಬಿಹಾರ ಆಂದೋಲನ ಹಳ್ಳಿ ಹಳ್ಳಿಗಳಿಗೂ ಹಬ್ಬಿತು. ರಾಜ್ಯಸರ್ಕಾರ ಆಂತರಿಕ ಸಂರಕ್ಷಣಾ ಕಾಯಿದೆ (ಮೀಸಾ) ಬಳಸಿ ವಿದ್ಯಾರ್ಥಿ ನಾಯಕರನ್ನು ಬಂಧಿಸಲಾರಂಭಿಸಿತು. ಸಾವಿರಾರು ವಿದ್ಯಾರ್ಥಿಗಳು ಸೆರೆಮನೆ ಸೇರಿದರು. ಜೊತೆಗೆ ಕರ್ಪೂರಿ ಠಾಕೂರ್, ಎಸ್. ಎಂ. ಜೋಷಿ, ಕೈಲಾಸಪತಿ ಮಿಶ್ರಾ, ಸಿದ್ಧರಾಜ ದಡ್ಢಾ ಮುಂತಾದ ರಾಜಕೀಯ ಹಾಗೂ ಸರ್ವೋದಯ ನಾಯಕರನ್ನು ಬಂಧಿಸಲಾಯಿತು. ರಾಜ್ಯಾದ್ಯಂತ 'ತೆರಿಗೆ ಕೊಡದೆ ಸರ್ಕಾರಿ ಕಛೇರಿಗಳನ್ನು ಘೇರಾವೋ ಮಾಡಿ' ಎಂಬ ಕರೆಯನ್ನು ಕೊಡಲಾಗಿ, ರಾಜ್ಯದ ವಿರೋಧ ಪಕ್ಷಗಳು ಈ ಕಾರ್ಯಕ್ರಮದಲ್ಲಿ ಸಮನ್ವಯ ಸಮಿತಿಯೊಂದನ್ನು ರಚಿಸಿಕೊಂಡು ಭಾಗವಹಿಸತೊಡಗಿ, ಆಂದೋಲನ ರಾಜಕೀಯ ಆಯಾಮ ಪಡೆಯಿತು. ಸರ್ಕಾರ ಲಾಠಿ ಪ್ರಯೋಗ, ಬಂಧನ, ಸೆರೆಮನೆಯಲ್ಲಿ ಕಿರುಕುಳ ಮುಂತಾದ ದಮನ ಕ್ರಮಗಳನ್ನು ಹೆಚ್ಚಿಸಿತು. ಇದರ ವಿರುದ್ಧ ಜಯಪ್ರಕಾಶರು ಅಕ್ಟೋಬರ್ ೩, ೪ ಹಾಗೂ ೫ರಂದು ಬಿಹಾರ ಬಂದ್‌ಗೆ ಕರೆ ನೀಡಿದರು. ಛೋಟಾ ನಾಗಪುರ ಎಂಬ ಕಮ್ಯೂನಿಸ್ಟ್ ಕಾರ್ಮಿಕ ಸಂಘದ ಪ್ರಾಬಲ್ಯವಿರುವ ಜಿಲ್ಲಾ ಕೇಂದ್ರವೊಂದರ ಹೊರತಾಗಿ ಇಡೀ ರಾಜ್ಯ ಶಾಂತಿಯುತ ಬಂದ್ ಆಚರಿಸಿತು.

ಜಯಪ್ರಕಾಶರು ಈ ಸಂದರ್ಭದಲ್ಲಿ, ಜನತೆ ಯಶಸ್ವಿ ಬಂದ್ ಮೂಲಕ ವ್ಯಕ್ತಪಡಿಸಿರುವ ಇಚ್ಛೆಯಂತೆ ವಿಧಾನಸಭಾ ಸದಸ್ಯರು ರಾಜೀನಾಮೆ ನೀಡುವಂತೆ ಆಗ್ರಹಿಸಿದರು. ಇದಕ್ಕೆ ನವೆಂಬರ್ ೪ರ ಗಡುವು ನೀಡಿ ಅಂದು ಸಚಿವರೆಲ್ಲರ ಮನೆಗಳ ಮುಂದೆ ಧರಣಿ ಕಾರ್ಯಕ್ರಮದ ಘೋಷಣೆ ಮಾಡಿದರು. ರಾಜೀನಾಮೆ

ನೀಡದೆ ಹೋದಲ್ಲಿ ರಾಜ್ಯದ ೩೧೮ ವಿಧಾನಸಭಾ ಕ್ಷೇತ್ರಗಳಲ್ಲೂ ಜನಸಂಘರ್ಷ ಸಮಿತಿಗಳ ಮೂಲಕ ಚುನಾವಣೆ ನಡೆಸಿ 'ಜನತಾ ವಿಧಾನಸಭೆ'ಯನ್ನು ಸಂಘಟಿಸುವುದಾಗಿ ಅವರು ಕೊನೆಯ ಎಚ್ಚರಿಕೆ ನೀಡಿದರು. ಅದಕ್ಕಾಗಿ ಪ್ರತಿಕ್ಷೇತ್ರದಲ್ಲೂ ಗ್ರಾಮಸಭೆ ಆಯ್ಕೆ ಮಾಡುವ ಜನಸಭೆಗಳ ರಚನೆಗಾಗಿ ಛಾತ್ರ ಹಾಗೂ ಜನಸಂಘರ್ಷ ಸಮಿತಿಗಳಿಗೆ ಜವಾಬ್ದಾರಿಯನ್ನು ಹಂಚಿದರು. ಈ ಪ್ರಕ್ರಿಯೆಯ ಪ್ರತಿಹಂತದಲ್ಲೂ ಮಹಿಳೆಯರಿಗೆ, ಅಸ್ಪೃಶ್ಯರಿಗೆ, ಮುಸ್ಲಿಮರಿಗೆ, ಆದಿವಾಸಿಗಳಿಗೆ ಹಾಗೂ ಬಡವರಿಗೆ ಸೂಕ್ತ ಪ್ರಾತಿನಿಧ್ಯ ನೀಡುವಂತೆ ನೋಡಿಕೊಳ್ಳಲು ಸೂಚಿಸಿದರು. ಜನ ಯಾವ ಹಂತದಲ್ಲೂ ತೆರಿಗೆ ಕೊಡದೆ, ಪೋಲಿಸ್ ಠಾಣೆಗಳನ್ನು ಬಹಿಷ್ಕರಿಸಿ, ಗ್ರಾಮಶಾಂತಿದಳದ ಆಡಳಿತದಲ್ಲಿ ಹಳ್ಳಿಗಳು ಬದುಕು ನಡೆಸುವಂತೆ ಹಾಗೂ ಸ್ವಯಂ ಇಚ್ಛೆಯಿಂದ ಬರುವ ದೇಣಿಗೆಯ ಮೂಲಕ ಆಡಳಿತಾತ್ಮಕ ಖರ್ಚನ್ನು ನಿರ್ವಹಿಸುವಂತೆ ಅವರು ಸಲಹೆ ಮಾಡಿದರು.

ಈ ಮಧ್ಯೆ ಜಯಪ್ರಕಾಶರು ವಿವಿಧ ರಾಜ್ಯಗಳ ವಿದ್ಯಾರ್ಥಿನಾಯಕರ, ಸರ್ವೋದಯ ಕಾರ್ಯಕರ್ತರ ಹಾಗೂ ಬುದ್ಧಿಜೀವಿಗಳ ಆಹ್ವಾನದ ಮೇರೆಗೆ ಕರ್ನಾಟಕವೂ ಸೇರಿದಂತೆ ಅನೇಕ ರಾಜ್ಯಗಳ ಪ್ರವಾಸ ಕೈಗೊಂಡು ಸಂಪೂರ್ಣ ಕ್ರಾಂತಿಗೆ ಬೆಂಬಲ ಕೋರಿದರು. ಎಲ್ಲಿಯೂ ಪಕ್ಷ ರಾಜಕಾರಣದ ಪರಿಭಾಷೆಯಲ್ಲಿ ಮಾತನಾಡದೆ, ರಾಷ್ಟ್ರದ ರಾಜಕೀಯದ ಒಟ್ಟಾರೆ ಅವನತಿಯನ್ನು ತಡೆಯಲು ಜನಶಕ್ತಿಯನ್ನು ಸಂಘಟಿಸುವ ಆಂದೋಲನ ರೂಪಿಸುವಂತೆ ಕರೆಕೊಟ್ಟರು. ಇದರಿಂದಾಗಿ, ರಾಜಕೀಯ ಪಕ್ಷಗಳ ನಾಯಕರಲ್ಲಿ ವಿಶ್ವಾಸ ಕಳೆದುಕೊಂಡು ಹೊಸನಾಯಕರ ಆಗಮನಕ್ಕಾಗಿ ತಹತಹಿಸುತ್ತಿದ್ದ ಇಡೀ ರಾಷ್ಟ್ರದ ಅಶಾಂತ ವಿದ್ಯಾರ್ಥಿ ಹಾಗೂ ಯುವಶಕ್ತಿ, ಜಯಪ್ರಕಾಶರನ್ನು ತಮ್ಮ ನಾಯಕನನ್ನಾಗಿ ಒಪ್ಪಿಕೊಂಡಿತು. ಅವರು ಭೇಟಿನೀಡಿದ ಉತ್ತರಪ್ರದೇಶ, ಹರಿಯಾಣ, ಪಂಜಾಬ್, ಒರಿಸ್ಸಾ, ಆಂಧ್ರ, ಮಹಾರಾಷ್ಟ್ರ, ರಾಜಸ್ಥಾನ, ಕರ್ನಾಟಕ, ಮಧ್ಯಪ್ರದೇಶ ಮುಂತಾದ ರಾಜ್ಯಗಳಲ್ಲಿ ಸಂಪೂರ್ಣ ಕ್ರಾಂತಿಗಾಗಿ ಜನ ಸಂಘರ್ಷ ಸಮಿತಿಗಳನ್ನೂ, ನವ ನಿರ್ಮಾಣ ಸಮಿತಿಗಳನ್ನೂ ರಚಿಸಲಾಯಿತು. ಇವುಗಳ ಚಟುವಟಿಕೆಗಳು ಜೆ.ಪಿ. ಚಳುವಳಿಯೆಂದೇ ಪ್ರಖ್ಯಾತವಾಯಿತು. ಲೋಕನಾಯಕ ಜಯಪ್ರಕಾಶ ನಾರಾಯಣರು ಈಗ ಜನರ ನೆಚ್ಚಿನ ಜೆ.ಪಿ. ಆಗಿದ್ದರು.

* * *

ಸಂಪೂರ್ಣ ಕ್ರಾಂತಿಯ ಆಧ್ಯಾತ್ಮಿಕ ನೆಲೆಗಟ್ಟು

– ಸತ್ಯವ್ರತ

ಸಂಪೂರ್ಣ ಕ್ರಾಂತಿಯ ಪರಿಕಲ್ಪನೆ ಒಮ್ಮೆಲೆ ಒಡಮೂಡಿ ಬರಲಿಲ್ಲ. ಜೂನ್ ೫ನೇ ದಿನ ಅದರ ಘೋಷಣೆಯಾದುದು ಚಾರಿತ್ರಿಕ ಆಕಸ್ಮಿಕವಲ್ಲ. ಅದು ಕಲ್ಪನಾಲೋಕದಿಂದ ಸ್ಫುರಿಸಿ ಬರಲೂ ಇಲ್ಲ. ಅದು ಜಯಪ್ರಕಾಶರ ವ್ಯಕ್ತಿತ್ವ ಮತ್ತು ವಿಚಾರದ ಕ್ರಮಿಕ ವಿಕಾಸದ ಫಲವಾಗಿ ಪ್ರಕಟವಾಯಿತು. ಅದಕ್ಕೆ ಮೊದಲು ಮತ್ತು ಅನಂತರ ಭಾರೀ ಪ್ರಮಾಣದ ದೀರ್ಘಕಾಲಿಕ ಪೂರ್ವಸಿದ್ಧತೆ ನಡೆಯಿತು. ಆ ಎಲ್ಲ ಪೂರ್ವಸಿದ್ಧತಾ ಕ್ರಮಗಳು ಜಯಪ್ರಕಾಶರಿಗೆ ಒಂದೊಂದು ಆಧ್ಯಾತ್ಮಿಕ ಆರೋಹಣದ ಸೋಪಾನಗಳಂತಾದವು. ಅವೆಲ್ಲ ಒಟ್ಟುಗೂಡಿ ಜೆಪಿಯವರು ಒಂದು ಕ್ರಾಂತಿಕಾರ್ಯಕ್ಕೆ ಸಮರ್ಪಿಸಿಕೊಳ್ಳುವಂತೆ ಅವರ ಹೃನ್ಮನಗಳನ್ನು ಅಣಿಗೊಳಿಸಿದವು. ಆಧ್ಯಾತ್ಮಿಕ ಆರೋಹಣವಾಗದೆ ಸಂಪೂರ್ಣ ಕ್ರಾಂತಿಯಂಥ ಸಂಕಲ್ಪ ಮತ್ತು ಉದ್ಘೋಷ ಹೇಗೆ ತಾನೇ ಸಾಧ್ಯವಾದೀತು? ಆರೋಹಣವಾಯಿತೆಂದು ಸೋಪಾನವನ್ನೇ ಮರೆಯಲಾದೀತೆ? ಅವನ್ನೇ ತಿರಸ್ಕರಿಸಲಾದೀತೆ? ಆದುದರಿಂದ ಜೆಪಿಯವರ ಆಧ್ಯಾತ್ಮಿಕ ಆರೋಹಣವೆನಿಸಿದ ಕೆಲವು ಪ್ರಸಂಗಗಳನ್ನು ಇಲ್ಲಿ ಸ್ಮರಿಸಿಕೊಳ್ಳಬೇಕಾದದ್ದು ಅವಶ್ಯಕ. ಇಲ್ಲಿ ಕೆಲವು ಪಾವನ ಪ್ರಸಂಗಗಳನ್ನು ಪ್ರಸ್ತಾಪಿಸಲಾಗಿದೆ.

ಮೊಟ್ಟಮೊದಲನೆಯದಾಗಿ ಪುಣೆಯಲ್ಲಿ ಜಯಪ್ರಕಾಶರು ತಮ್ಮ ಆತ್ಮಶುದ್ಧ್ಯರ್ಥವಾಗಿ ಕೈಗೊಂಡ ೨೧ ದಿನಗಳ ದೀರ್ಘಕಾಲಿಕ ಉಪವಾಸ. ಉಪವಾಸ ೧೯೫೨ನೇ ಜೂನ್ ೨೪ರಿಂದ ೧೪ನೇ ಜುಲೈ ವರೆಗೆ ನಡೆಯಿತು. ಉಪವಾಸಕ್ಕೆ ವಿನೋಬಾಜಿ, ಗಾಂಧೀಯವರ ಕಾರ್ಯದರ್ಶಿ ಪ್ಯಾರೇಲಾಲ್‌ಜಿ ಕಿಶೋರ್‌ಲಾಲ್ ಮಶ್ರುವಾಲ, ಪಂಡಿತ ನೆಹ್ರೂರಂಥವರೆಲ್ಲರ ಸಮರ್ಥನೆ ಮತ್ತು ಶುಭಾಶಯಗಳು ದೊರೆತವು ಅದು ಶಾಂತಿಮಯವಾಗಿ, ನಿರಾತಂಕವಾಗಿ, ಪ್ರಸನ್ನಚಿತ್ತ ಸ್ಥಿತಿಯಲ್ಲಿ ನಡೆಯಿತು. ಈ ಅವಧಿಯಲ್ಲಿ ಭಗವದ್ಗೀತೆ, ಉಪನಿಷತ್ತು ಮತ್ತು ಹಕ್ಸಲೇ ಅವರ 'ಪೆರಿನಿಯಲ್ ಫಿಲಾಸಫಿ' ಗ್ರಂಥಗಳ ಅಧ್ಯಯನ ನಡೆಯುತ್ತಿತ್ತು. ಆ ಸಮಯದಲ್ಲಿ ಅವರು ಹೆಚ್ಚು ಅಂತರ್ಮುಖಿಯಾಗಿ ಚಿಂತನದಲ್ಲಿ ನಿಮಗ್ನರಾಗಿರುತ್ತಿದ್ದರು. ಮನುಷ್ಯ ಉನ್ನತ ಮಟ್ಟಕ್ಕೇರುತ್ತಾ ಸರ್ವೋಚ್ಚ ಸ್ಥಿತಿಯನ್ನು ತಲುಪಲು ನೆರವಾಗುವಂಥ ಸಾಂಸ್ಕೃತಿಕ ಸಮಾಜದ ನಿರ್ಮಾಣ ಆಗಬೇಕಾದದ್ದು, ವ್ಯಕ್ತಿ ನಿರಂತರಕ ಒಳ್ಳೆಯವನಾಗುತ್ತಾ ಹೋಗುವುದು ಅವಶ್ಯಕ – ಇವೇ ಅವರ ಚಿಂತನಾ ಚಕ್ರದ ಮುಖ್ಯ ವಸ್ತುಗಳಾಗಿದ್ದವು. ತೀವ್ರ ಮನೋಮಂಥನ ಮತ್ತು

ಚಿಂತನೆಯ ಫಲವಾಗಿ ಮಾರ್ಕ್ಸ್‌ನ ದ್ವಂದ್ವಾತ್ಮಕ ಭೌತವಾದ ಮನಷ್ಯನ ಒಳ್ಳೆಯತನಕ್ಕೆ ಪ್ರೇರಣೆ ಕೊಡಲಾರದೆಂಬ, ಒಳ್ಳೆಯತನದ ಕಡೆ ಒಯ್ಯಲಾರದೆಂಬ ನಿಷ್ಕರ್ಷೆಗೆ ಬಂದರು. 'ಭೌತವಾದಿ ಸಭ್ಯತೆಯಲ್ಲಿ ಮನಷ್ಯ ಒಳ್ಳೆಯ ಮನುಷ್ಯನಾಗಿ ರೂಪುಗೊಳ್ಳಲು ಬೇಕಾದ ಯಾವ ಬುದ್ಧಿಗಮ್ಯ ಪ್ರೇರಣೆಯೂ ಉಳಿಯಲಾರದು. ಆದುದರಿಂದ ಅಂಥ ಭೌತವಾದಿ ಜೀವನ ಪದ್ಧತಿಯಿಂದ ಮೇಲೇರಬೇಕು' ಎಂದು. ಇದನ್ನೇ ಇನ್‌ಸೆಂಟಿವ್ ಟು ಗುಡ್ನೆಸ್ ಎಂಬ ಹೇಳಿಕೆಯ ರೂಪದಲ್ಲಿ ಬಿಡುಗಡೆಮಾಡಿದರು. ಪರಿಣಾಮವಾಗಿ ಮಾರ್ಕ್ಸ್‌ನ 'ಕ್ರಾಂತಿಕಾರಿ ನೀತಿಶಾಸ್ತ್ರ'ವನ್ನು ತೊರೆದು ಗಾಂಧೀಯವರ 'ಸಾಧನ-ಸಾಧ್ಯದ ಏಕರೂಪತೆ'ಯ ಪ್ರತಿಪಾದಕರಾದರು. ಇಪ್ಪತ್ತೊಂದು ದಿನಗಳ ಉಪವಾಸ ಅವರ ಆಧ್ಯಾತ್ಮಿಕ ಯಾತ್ರೆಯೆನಿಸಿತು.

ಜಯಪ್ರಕಾಶರ ಆಧ್ಯಾತ್ಮಿಕ ಆರೋಹಣಕ್ಕೆ ಎಲ್ಲಾ ಬಗೆಯ ಸದವಕಾಶವನ್ನು ತಂದುಕೊಟ್ಟ ಎರಡನೇ ಪಾವನ ಪ್ರಸಂಗವೆಂದರೆ ಅದು ಚಂಬಲ್ ಕಣಿವೆಯ ಡಕಾಯಿತರ ಹೃದಯ ಪರಿವರ್ತನೆ ಮತ್ತು ಆತ್ಮಸಮರ್ಪಣೆಯ ಐತಿಹಾಸಿಕ ಅಭೂತಪೂರ್ವ ಘಟನೆ. ಜಯಪ್ರಕಾಶರು ಸಕಲ ಸಿದ್ಧತೆಯನ್ನೂ ಮಾಡಿಕೊಂಡ ನಂತರ ಚಂಬಲ್ ಕಣಿವೆಯನ್ನು ೧೯೭೨ನೇ ಏಪ್ರಿಲ್ ಹನ್ನೊಂದನೇ ತಾರೀಖು ಪ್ರವೇಶಿಸಿದರು. ಅಂದೇ ರಾತ್ರಿ ಅತಿ ಕ್ರೂರಿ, ಅತಿ ದೊಡ್ಡ ಡಕಾಯತ ದಳದ ಪ್ರಮುಖ, ೨ ಲಕ್ಷ ತಲೆಬೆಲೆ ಹೊತ್ತ ಮೊಹರ್ ಸಿಂಗ್ ಅವರನ್ನು ಭೇಟಿಯಾದ. ಆತನೊಡನೆ ಆದ ಮಾತುಕತೆಯ ಫಲವಾಗಿ ಜಯಪ್ರಕಾಶರು "ನನ್ನ ಮುಂದೆ ಆತ್ಮಸಮರ್ಪಣೆ ಮಾಡಿಕೊಳ್ಳುವ ಯಾವುದೇ ಡಕಾಯಿತನಿಗೆ ಗಲ್ಲು ಶಿಕ್ಷೆಯಾಗುವುದನ್ನು ಸಹಿಸಲಾರೆ. ನಿಮ್ಮಲ್ಲಿ ಒಬ್ಬೊಬ್ಬರ ಪ್ರಾಣವು ನನ್ನ ಪ್ರಾಣದಷ್ಟೇ ಸಮಾನ. ನಿಮ್ಮಲ್ಲಿ ಯಾರಿಗೇ ಆಗಲೀ ಗಲ್ಲಿನ ಶಿಕ್ಷೆಯಾಯಿತೆಂದರೆ ನಾನು ಉಪವಾಸ ಮಾಡಿ ಸತ್ತು ಹೋಗುವೆನು" ಎಂದರು. ಅವರ ಹೇಳಿಕೆ ವಿದ್ಯುತ್ ಸಂಚಾರವನ್ನುಂಟುಮಾಡಿತು. ಅತೀವ ಪ್ರಭಾವ ಉಂಟಾಯಿತು. ಡಕಾಯಿತರ ಕರುಳು ಕಿತ್ತುಬಂತು. ಅವರ ಹೃದಯ ಕರಗಿಹೋಯಿತು. ಮೊಹರ್ ಸಿಂಗ್ ಕುಣಿದಾಡಿದ, ಭಾವಪರವಶನಾದ. ಡಕಾಯಿತರು ಎಂಥ ಚರಮಸೀಮೆಯ ತ್ಯಾಗಕ್ಕೂ ಸಿದ್ಧರೆಂಬ ವಾತಾವರಣ ಉಂಟಾಯಿತು. ಪಾಪಾತ್ಮರೊಡನೆಯೂ ಆತ್ಮೌಪಮ್ಯಸಾಧಿಸಿ ಅವರ ಹೃದುಯ ಪರಿವರ್ತನೆಗೆ ನಿಮಿತ್ತರಾದರು. ಜೆಪಿ ಸರಿಸುಮಾರು ೫೨೨ಜನ ಡಕಾಯಿತರು ಆತ್ಮಸಮರ್ಪಣೆಮಾಡಿಕೊಂಡರು. ಇಂಥಾ ಚಮತ್ಕಾರ, ಅಭೂತಪೂರ್ವ, ಜಗದ್ವಿಖ್ಯಾತ, ಪವಾಡ ಸದೃಶ ಪಾವನ ಪ್ರಸಂಗ ಭಾರತದಂಥ ಭೂಮಿಯಲ್ಲೇ ಸಾಧ್ಯ ಎಂದು ವಿಶ್ವದಲ್ಲೆಡೆ ಉದ್ಗರಿಸುವಂತಾಯಿತು. ಆದರೆ ಜೆಪಿ ಈ ಚಮತ್ಕಾರ ಘಟನೆಯ ಶ್ರೇಯವನ್ನೆಲ್ಲಾ ಪರಮಾತ್ಮ ಗಾಂಧೀಜಿ ಮತ್ತು ವಿನೋಬಾರಿಗೆ ಕೊಟ್ಟರು. ತಮಗಾದ ದಿವ್ಯಾನುಭೂತಿಯಲ್ಲಿ ಹೆಚ್ಚು ನಮ್ರರು,

ಅಹಂಕಾರಶೂನ್ಯರು, ಹೆಚ್ಚು ಮೃದು ಸ್ವಭಾವದವರೂ ಆದರು. ಡಕಾಯಿತರ ಹೃದಯ ಪರಿವರ್ತನೆ ಆಯಿತೋ ಇಲ್ಲವೋ ತಮ್ಮ ಹೃದಯ ಪರಿವರ್ತನೆಯಾಯಿತು ಎಂದರು. ತಾವು ಭಗವಂತನ ಕೈಯ ಅಸ್ತ್ರವಾದಂತೆ ಆಗಿದ್ದೇನೆ. ಅವರಿಗೆ ತಮ್ಮಲ್ಲಿ ಅದೃಶ್ಯ ಪರಮಶಕ್ತಿಯ ಪ್ರತ್ಯಕ್ಷ ಸಂಚಾರ ಆಗುತ್ತಿದೆ ಎನಿಸಿತು. ೧೯೫೪ರ ಬೋಧಗಯೆಯಲ್ಲಿ ತಮ್ಮ ಜೀವನದಾನ, ಡಕಾಯಿತರ ಆತ್ಮಸಮರ್ಪಣೆ, ಅದೇ ರೀತಿ ಪುಣೆಯ ಉಪವಾಸ ಇವು ಜೀವನದ ಆಧ್ಯಾತ್ಮಿಕ ಯಾತ್ರೆ ಆಯಿತು ಎಂದರು. "ಇಂಥಾ ಕ್ಷಣಗಳಲ್ಲಿ ಪರಮಾತ್ಮ ನಮ್ಮನ್ನು ಸನ್ಮಾರ್ಗ ಪ್ರವೃತ್ತರನ್ನಾಗಿ ಮಾಡುತ್ತಾನೆ" ಎಂದರು.

ಮೂರನೆಯ ಸಂಸ್ಮರಣೆಯೂ ಇಂಥದೇ ಗಂಭೀರ ಪ್ರಸಂಗವಾಯಿತು. ೧೯೪೦ರಲ್ಲಿ ಜಯಪ್ರಕಾಶಜೀ ಮತ್ತು ಪ್ರಭಾವತಿಯವರು ವಾರ್ಧಾದಿಂದ ಬೊಂಬಾಯಿಗೆ ಪ್ರಯಾಣಮಾಡುತ್ತಿದ್ದರು. ವೆಂಕಟೇಶ ವಕೀಲನೆಂಬ ಪತ್ರಕರ್ತ ಪ್ರಭಾವತಿ ಅವರನ್ನು ಸಂದರ್ಶಿಸಿದ; ವಿಶೇಷ ಪ್ರಶ್ನೆ ಕೇಳುತ್ತಾ "ಜಯಪ್ರಕಾಶರು ಸ್ವತಂತ್ರ ಭಾರತದಲ್ಲಿ ಅಧ್ಯಕ್ಷರಾಗಿರುವುದು ನಿಮಗೆ ಇಷ್ಟವೋ, ಆಥವಾ ದೇಶಕ್ಕಾಗಿ ಅವರು ಬಲಿದಾನ ಮಾಡಿದ್ದಾದರೆ ಅದನ್ನು ಹೆಚ್ಚು ಇಷ್ಟಪಡುವಿರೋ?" ಎಂದ. ಕ್ಷಣಾರ್ಧವೂ ಯೋಚಿಸದೆ, ತಡಮಾಡದೆ ಪ್ರಭಾವತಿಯವರು "ಇವರಿಗೆ ಆದರ ಸನ್ಮಾನ ಮಾಡುವುದರ ಬದಲು ಇವರ ಬಲಿದಾನವಾಗುವುದೇ ನನಗೆ ಹೆಚ್ಚು ಇಷ್ಟ" ಎಂದುತ್ತರಿಸಿದ್ದರು. ಅದನ್ನು ಕೇಳಿ ವಿನೋದದಿಂದ "ನನ್ನ ನಸೀಬು!" ಎಂದಿದ್ದರು ಜಯಪ್ರಕಾಶರು.

ಇಲ್ಲಿ ಪ್ರಸ್ತಾಪಿಸಿರುವ ಮೂರೂ ಸಂಸ್ಮರಣೆಗಳು ಜೆ.ಪಿಯವರ ಮೇಲೆ ಗಾಢ ಪ್ರಭಾವವನ್ನುಂಟುಮಾಡಿದವು. ಮೊದಲನೆಯದರಿಂದ ಅದರಲ್ಲಿ ವೈಚಾರಿಕ ದೃಢತೆ ಮತ್ತು ನಿಷ್ಠೆ ವೃದ್ಧಿಸಿದವು, ಎರಡನೆಯದರಿಂದ ಅವರು ಹೆಚ್ಚು ಹೆಚ್ಚು ನಿರಹಂಕಾರಿಗಳೂ, ಆತ್ಮವಿಶ್ವಾಸ ಹೆಚ್ಚಿಸಿಕೊಂಡವರೂ ಆದರು. ಮೂರನೆಯದರಿಂದ ತಾವು ಎಂಥ ತ್ಯಾಗ-ತಪಸ್ಸು ಮತ್ತು ಎಂಥ ಚರಮಸೀಮೆಯ ಬಲಿದಾನಕ್ಕೂ ಸಿದ್ಧರೆಂಬುದನ್ನು ತೋರಿಸಿಕೊಡುವಂತಾಯಿತು. ಯಾವುದೇ ದೇಶವ್ಯಾಪಿ ಕ್ರಾಂತಿಕಾರ್ಯಕ್ಕೆ ಇವೇ ಬುನಾದಿ ಗುಣಗಳು ಅವಶ್ಯಕವಾಗುತ್ತವೆ ಮತ್ತು ಅಂಥ ವ್ಯಕ್ತಿ ಅಪರಿಮಿತ ಧೈರ್ಯಶಾಲಿಯೂ ಆಗುತ್ತಾನೆ. ಇಂಥ ದೈವೀ ಸಂಪತ್ತಿಯಿಂದ ಓತಪ್ರೋತನಾದವನು ಮಾತ್ರ ಒಂದು ರಾಷ್ಟ್ರವ್ಯಾಪಿ ಆಂದೋಲನದ ಆದ್ಯ ಪ್ರವರ್ತಕನೆನಿಸಬಲ್ಲ.

ಇನ್ನು ನಾಲ್ಕನೆಯ ಸಂಗತಿ. ಸಂಪೂರ್ಣಕ್ರಾಂತಿ ಆಕಸ್ಮಿಕವಲ್ಲ ಅದು ಅವರ ವೈಚಾರಿಕ ವಿಕಾಸದ ಫಲವೆಂದು ಪ್ರಾರಂಭದಲ್ಲೇ ಹೇಳಿಯಾಗಿದೆ. ಸಂಪೂರ್ಣಕ್ರಾಂತಿಯ ಆವಶ್ಯಕವಾಗಿಹೋಗಿದೆಯೆಂಬ ಆಶಯದ ಭಾಷಣ ಮತ್ತು

ವಿಚಾರಮಂಡನೆ ಸ್ವಲ್ಪ ಕಾಲದ ಮುಂಚೆಯೇ ಅ.ಭಾ.ಸರ್ವಸೇವಾ ಸಂಘದ ತಿರುಪತಿ ಅಧಿವೇಶನದಲ್ಲಿ ಆಗಿತ್ತು. ಆಗ ಜೆ.ಪಿ. 'ಸಮಗ್ರಕ್ರಾಂತಿ'ಯ ಅಗತ್ಯವಿದೆಯೆಂದಿದ್ದರು. ಅಂತೂ ಶಬ್ದೋಚ್ಚಾರಣೆ ಮತ್ತು ವೈಚಾರಿಕ ನೆಲೆಗಟ್ಟು ತಯಾರಾಗುತ್ತಾ ನಡೆದಿದ್ದವು. ಅವರ ಮನಸ್ಸು ಇದರ ಜೊತೆಗೇ ಬಲಿದಾನದ ಭಾವನೆಯನ್ನು ಬೆಳೆಸುತ್ತಾ ನಡೆದಿತ್ತು. ೧೯೭೩ನೇ ಏಪ್ರಿಲ್ ೧೫ನೇ ತಾರೀಖು ಪ್ರಭಾವತಿಯವರ ನಿಧನಾನಂತರ ಅವರಲ್ಲಿ ಬಲಿದಾನದ ಭಾವನೆ ಬಲಿಯಿತು. ಅವರನ್ನು ಕಾಣಲುಹೋದ ಜ್ಯೋತಿ ಬಸು ಅವರಿಗೆ ಅದರ ಕಿಂಚಿತ್ ದರ್ಶನವಾಯಿತು. ಹೀಗೆ ಎಲ್ಲ ಘಟನಾವಳಿಯ ಸಮ್ಮಿಳಿತ ಪರಿಣಾಮವೇ ಬಿಹಾರ ಆಂದೋಲನದ ವೈಚಾರಿಕ ನೆಲೆಗಟ್ಟನ್ನೂ, ಸಂಪೂರ್ಣಕ್ರಾಂತಿಯ ಉದ್ಘೋಷಕ್ಕೆ ಬೇಕಾದ್ದ ದಿಶಾದರ್ಶನವನ್ನೂ ಗೊತ್ತುಮಾಡಿದವು.

* * *

ಸನ್ಮಾನ್ಯರಿಂದ

೨೦೦೭ ಏಪ್ರಿಲ್ ಮತ್ತು ಮೇ ಮಾಹೆಗಳ ಜನಪದ ವಿಚಾರ ಓದಿದೆ. ಅವುಗಳಲ್ಲಿಯ ಲೇಖನಗಳೆಲ್ಲವೂ ಮನ ಒಪ್ಪುವಂತಿವೆ. ಅವುಗಳನ್ನು ಓದಿ ಮನಸ್ಸಿಗೆ ಬಹಳ ಸಂತೋಷವೆನಿಸಿತು.

–ಬಿಸಪ್ಪಗೌಡ, ಕೋಲಾರ

* * *

ಪ್ರತಿ ತಿಂಗಳೂ ಜನಪದ ವಿಚಾರ ಓದುತ್ತೇನೆ. ಎರಡು ಮೂರು ದಿನ ಚಿಂತನೆ ಮಾಡುತ್ತೇನೆ. ೨೦೦೭ ಏಪ್ರಿಲ್ ಮಾಹೆಯ ಮಹಿಳಾ ಲೇಖನ ಆಲೋಚನಾಪೂರ್ಣವಾಗಿತ್ತು. ಗಾಂಧೀ ದೃಷ್ಟಿ, ಸರ್ವೋದಯ ದೃಷ್ಟಿ ಇವತ್ತೂ ಉಳಿದಿರುವುದು ಜನಪದದಲ್ಲಿ ಮಾತ್ರ. ಗಾಂಧಿ ಬಳಗ ಛಿದ್ರ ಛಿದ್ರವಾಗುತ್ತಿದೆ. ನಿಸ್ಸಹಾಯಕವಾಗಿ ನೋಡುತ್ತಾ ಇರಬೇಕಾದುದು ದುರಂತ. ಮೌಲ್ಯ ಪತನ ಆದಮೇಲೆ ಬಾಳಿಗೆ ಏನು ಅರ್ಥ?


ನಿಮ್ಮ ನೆನಪು, ನಿಮ್ಮ ಕಾರ್ಯ ನಡುನಡುವೆ ಸ್ವಲ್ಪ ಆಸೆ ಮೂಡಿಸುತ್ತವೆ. ಉಳಿದಂತೆ ಎಲ್ಲೆಡೆ ಮಬ್ಬೇ ಮಬ್ಬು.

– ನೀಲತ್ತಹಳ್ಳಿ ಕಸ್ತೂರಿ, ಬೆಂಗಳೂರು.

ಜನಪದ ವ್ಯಕ್ತಿ

ಸರಳತೆಯ ವಾಸ್ತುಶಿಲ್ಪಿ : ಲಾರಿ ಬೆಕರ್

– ಸುಜಿತ್ ಚೌಧುರಿ



ಭಾರತವನ್ನು ತನ್ನ ಮನೆಮಾಡಿಕೊಂಡಿದ್ದ ಪ್ರಖ್ಯಾತ ವಾಸ್ತುಶಿಲ್ಪಿ ಲಾರಿ ಬೆಕರ್ ಇನ್ನಿಲ್ಲವಾಗಿದ್ದಾರೆ. ತಮ್ಮ ಉತ್ಸಾಹಭರಿತ ವಿಚಾರಗಳು ಮತ್ತು ಪರಂಪರೆಯನ್ನು ಬಿಟ್ಟುಹೋಗಿದ್ದಾರೆ. ಕಟ್ಟಡ ವಿನ್ಯಾಸ ಶಾಸ್ತ್ರದ ಬಗ್ಗೆ ಇದ್ದ ಅವರ ನಿಲುವು ಬಹಳ ಕ್ರಾಂತಿಕಾರಿಯಾಗಿದೆ ಎನ್ನಬಹುದು, ಏಕೆಂದರೆ ಅವರು ತಮ್ಮ ವಿನ್ಯಾಸಗಳಲ್ಲಿ ಸ್ಥಳೀಯ ರೂಢಿಗತ ಪದ್ಧತಿಗಳು, ಪರಿಸರ ಸ್ನೇಹಿತನ ಮಿತವ್ಯಯಿತ್ವ ಮತ್ತು ಸರಳತೆಯನ್ನು ನಿಜವಾಗಿಯೂ ಆಧುನಿಕ ಶೈಲಿಯಲ್ಲಿ ಒಗ್ಗೂಡಿಸಿಕೊಂಡಿದ್ದಾರೆ. 'ಕಟ್ಟಡವು ಸತ್ಯಪೂರ್ಣವಾಗಿರಬೇಕು' ಎಂಬ ಅವರ ನುಡಿ ಕಟ್ಟಡ ವಿನ್ಯಾಸದ ಬಗೆಗಿನ ಅವರ ನಿಲುವನ್ನು ಸ್ಪಷ್ಟಪಡಿಸುತ್ತದೆ. 'ಸತ್ಯಪೂರ್ಣವಾಗಿರಬೇಕು' ಎಂಬ ಅವರ ನುಡಿ ಕಟ್ಟಡ ಶಾಸ್ತ್ರದ ಋಜುತ್ವ ಮತ್ತು ಮಿತವ್ಯಯದ ಅಂಶಗಳನ್ನು ಹೊರಗಿನ ಸಾಮಾಜಿಕ, ಆರ್ಥಿಕ ಮತ್ತು ಪರಿಸರದ ದೃಷ್ಟಿಕೋನದಿಂದ ವೀಕ್ಷಿಸಿದಾಗ ಹೆಚ್ಚು ಸ್ಪಷ್ಟವಾಗುತ್ತದೆ. ಈ ಅಂಶಗಳೇ ಲಾರಿ ಬೆಕರ್ ಅವರನ್ನು ಜನಪ್ರಿಯ ಏಕವ್ಯಕ್ತಿ ಸಂದೇಶವಾಹಕನನ್ನಾಗಿಯೂ, ಅವರ ವಿನ್ಯಾಸಗಳನ್ನು ವ್ಯಕ್ತಿ ವಿಶಿಷ್ಟ ಶೈಲಿಯನ್ನಾಗಿಯೂ ರೂಪಿಸಿವೆ.

೧೯೪೫ ರಲ್ಲಿ ಒಮ್ಮೆ ಗಾಂಧೀಯವರನ್ನು ಭೇಟಿಮಾಡಿದ ಸಂದರ್ಭವೇ ತರುಣ ಲಾರಿ ಬೆಕರ್ ಅವರ ಜೀವನದ ತಿರುವುಸೂಚಿಯಾಯಿತು. ೧೯೩೭ರಲ್ಲಿ ಲಾರಿ ಬೆಕರ್, ಬರ್ಮಿಂಗ್‌ಹ್ಯಾಮ್‌ನ ಕಟ್ಟಡ ವಿನ್ಯಾಸ ವಿದ್ಯಾನಿಲಯದಿಂದ ಕಟ್ಟಡ ವಿನ್ಯಾಸದಲ್ಲಿ ಪದವಿ ಪಡೆದ ನಂತರ ಜಪಾನ್ ಮತ್ತು ಚೈನಾ ಯುದ್ಧದಲ್ಲಿ ತೊಡಗಿದ್ದ ಬ್ರಿಟಿಷ್ ಸೈನಿಕರಿಗೆ ವೈದ್ಯಕೀಯ ನೆರವು ನೀಡುವ ಕ್ವೇಕರ್ಸ್ ಎಂಬ ಪಡೆಯಲ್ಲಿ ಸ್ವಯಂಸೇವಕರಾಗಿ ಸೇರಿದರು. ಅವರು ಆ ಗುಂಪಿನಲ್ಲಿ ಚೈನಾ ಮತ್ತು ಬರ್ಮಾಗಳಲ್ಲಿ ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಅನಾರೋಗ್ಯದ ಕಾರಣ ಅಲ್ಲಿಂದ ಊರಿಗೆ ಹಿಂದಿರುಗಬೇಕಾಯಿತು.

ಊರಿಗೆ ಹಿಂದಿರುಗುವ ಸಮಯದಲ್ಲಿ ಅವರು ಕೆಲಕಾಲ ಮುಂಬೈನಲ್ಲಿ ಉಳಿಯಬೇಕಾಯಿತು ಆಗ ಅವರು ಗಾಂಧೀಯವರನ್ನು ಭೇಟಿಯಾದರು. ಗಾಂಧೀಯವರು ಬಡವರ, ಅದರಲ್ಲೂ ಹಳ್ಳಿಗಾಡಿನ ಜನರ ವಸತಿ ಸಮಸ್ಯೆಯ ಬಗ್ಗೆ ತಮ್ಮ ಕಳವಳವನ್ನು ವ್ಯಕ್ತಪಡಿಸಿದರು ಮತ್ತು ಭಾರತಕ್ಕೆ ಸಾಮಾಜಿಕ ಬದ್ಧತೆಯಿರುವ ದಕ್ಷ ಕಟ್ಟಡ ವಿನ್ಯಾಸಿಗಳ ಅವಶ್ಯಕತೆ ಇದೆ ಎಂದು ಹೇಳಿದರು. ಈ ಭೇಟಿ ಬೇಕರ್‌ರವರನ್ನು ಪುನಃ ಭಾರತಕ್ಕೆ ಕರೆತಂದಿತು. ಅವರು ೧೯೪೫ರಲ್ಲಿ ಕುಷ್ಠರೋಗ ನಿರ್ಮೂಲನಾ ಸಂಘಟನೆಯ ಸದಸ್ಯರಾಗಿ ಭಾರತಕ್ಕೆ ಹಿಂದಿರುಗಿದರು.

ಹೊಸತರಲ್ಲಿ ಅವರು ಡಾ. ಚಾಂಡಿಯವರ ಆತಿಥ್ಯದಲ್ಲಿ ಕೇರಳದಲ್ಲಿ ತಂಗಿದರು ಮತ್ತು ಜೊತೆಯಲ್ಲೇ ಅವರು ಭಾರತದಾದ್ಯಂತ ಸವಿಸ್ತಾರವಾಗಿ ಓಡಾಡಿದರು. ಈ ಓಡಾಟ ಅವರಿಗೆ ಭಾರತದ ಹಳ್ಳಿಗಳ ಆರ್ಥಿಕ ದಾರಿದ್ರ್ಯವನ್ನೂ ಅವುಗಳ ಸಾಂಸ್ಕೃತಿಕ ಭಿನ್ನತೆಯನ್ನೂ ಚೆನ್ನಾಗಿ ಪರಿಚಯಿಸಿತು. ಭಾರತದ ಕಟ್ಟಡ ಕಲೆಯಲ್ಲಿನ ವಿವಿಧತೆ ಮತ್ತು ಸ್ಥಳೀಯ ರೂಢಿಗಳ ವೈಶಿಷ್ಟ್ಯ ಬೇಕರ್‌ರವರನ್ನು ಬೆರಗುಗೊಳಿಸಿತು.

ಅವರು ಪ್ರತಿಯೊಂದು ಪ್ರದೇಶವೂ ತನ್ನ ಹವಾಮಾನ ಮತ್ತು ಸ್ಥಳೀಯವಾಗಿ ದೊರಕುವ ಸಾಮಗ್ರಿಗಳಿಗನುಸಾರವಾಗಿ ತನ್ನದೇ ಆದ ಕಟ್ಟಡ ರಚನಾ ಶೈಲಿಯನ್ನು ಗಳಿಸಿಕೊಂಡಿರುವುದನ್ನು ಗಮನಿಸಿದರು. ಎಲ್ಲೆಡೆಯೂ ಅವರಿಗೆ ಕಂಡುಬಂದ ಒಂದು ಸಾಮಾನ್ಯ ಅಂಶವೆಂದರೆ 'ಮಣ್ಣು'. ಪುನರ್ಬಳಕೆಯಾಗಬಲ್ಲ ಮಣ್ಣು ವ್ಯಾಪಕವಾಗಿ ಬಳಕೆಯಾಗಿತ್ತು ಮತ್ತು ಮಣ್ಣಿನಿಂದ ನಿರ್ಮಿತ ರಚನೆಗಳು ದೀರ್ಘಕಾಲ ಬಾಳಿದ್ದವು. ಸ್ಥಳೀಯ ಪರಿಜ್ಞಾನ ಮತ್ತು ಪರಿಪಾಟಗಳನ್ನು ಉಳಿಸಿಕೊಳ್ಳುವ ಅಗತ್ಯತೆ ಇರುವುದನ್ನು ಬೇಕರ್‌ರವರು ಮನಗಂಡರು.

ಪರಿಚಿತ ವಾತಾವರಣದಲ್ಲಿ ರೋಗಿಗಳು ಬೇಗನೆ ಗುಣಮುಖರಾಗುತ್ತಾರೆಂಬ ಆಶ್ಚರ್ಯಕರ ಸಂಗತಿ ತಮ್ಮ ಸುತ್ತಾಟದ ಸಮಯದಲ್ಲಿ ಬೇಕರ್‌ರವರ ಗಮನಕ್ಕೆ ಬಂತು ಅದರಂತೆ ಅವರು ತಾವು ಮುಂದೆ ನಿರ್ಮಿಸಿದ ಆಸ್ಪತ್ರೆ, ಶಾಲೆ ಮುಂತಾದ ಕಟ್ಟಡಗಳಿಗೆ ಸ್ಥಳೀಯವಾಗಿ ದೊರೆಯುವ ಸಾಮಗ್ರಿಗಳನ್ನೇ ಬಳಸಿದರು. ಕಟ್ಟಡದ ಕೆಲಸಗಳಿಗೆ ಸ್ಥಳೀಯ ಜನರನ್ನೇ ಆರಿಸಿಕೊಂಡು ಅವರಿಗೆ ಚಿತ್ರ ಮತ್ತು ನಕ್ಷೆಗಳ ಮೂಲಕ ಸೂಚನೆಗಳನ್ನು ನೀಡುತ್ತಿದ್ದರು.

ಹದಿನಾರು ವರ್ಷಗಳ ಕಾಲ ಅವರು ಉತ್ತರ ಭಾರತದ ಅನೇಕ ಕಡೆಗಳಲ್ಲಿ ಅವರು ಶಾಲೆ ಮತ್ತು ಆಸ್ಪತ್ರೆಗಳನ್ನು ನಿರ್ಮಿಸಿದರು ಮತ್ತು ನಿರ್ವಹಿಸಿದರು. ಆ ಸಮಯದಲ್ಲೇ ಅವರಿಗೆ ತಮ್ಮ ಸಹಕರ್ಮಿ ಮತ್ತು ಡಾ. ಪಿ.ಜೆ. ಚಾಂಡಿಯವರ

ಸಹೋದರಿ ಡಾ. ಎಲಿಜಬೆತ್ ಚಾಂಡಿಯವರೊಂದಿಗೆ ಮದುವೆಯಾಯಿತು. ಕೊಟ್ಟಾಯಂನ ವೇಗಮನ್‌ನಲ್ಲಿ ಅಲ್ಪಕಾಲದ ವಾಸದ ನಂತರ ೧೯೬೦ ರ ಹೊತ್ತಿಗೆ ಬೇಕರ್ ಕುಟುಂಬವು ಕೇರಳದ ತಿರುವನಂತಪುರಂನಲ್ಲಿ ನೆಲಸಿತು.

ಕ್ವೇಕರ್ ಸಂಘಟನೆಯ ವಿಚಾರಗಳು, ಗಾಂಧೀಯವರ ಪ್ರಭಾವ, ಸಾಮಾಜಿಕ ಕಾಳಜಿ ಮತ್ತು ಭಾರತೀಯ ಸಂಸ್ಕೃತಿಯ ಒಳ ಅರಿವು ಬೇಕರ್‌ರವರ ವೈಚಾರಿಕ ದೃಷ್ಟಿಕೋನವನ್ನು ರೂಪಿಸಿದವು. ಅವರು ಆಧುನಿಕ ಕಟ್ಟಡಗಳನ್ನು ಸ್ಥಳೀಯ ರೂಢಿಗತ ತಂತ್ರಜ್ಞಾನ ಮತ್ತು ಸಾಮಗ್ರಿಗಳನ್ನು ಬಳಸಿ ನಿರ್ಮಿಸಿದರು.

'ಕಡಿಮೆ ಖರ್ಚಿನ ಮನೆ' ಎಂಬ ಕಲ್ಪನೆಯನ್ನು ಅವರು ಸಾಕಾರಗೊಳಿಸಿದರು. ಅಲ್ಲಿಯವರೆಗೆ 'ಕಡಿಮೆ ಖರ್ಚಿನ ಮನೆ' ಎಂದರೆ 'ಕಡಿಮೆ ದರ್ಜೆಯ ಮನೆ' ಎಂದೇ ತಿಳಿಯಲಾಗುತ್ತಿತ್ತು! "ಕಡಿಮೆ ಖರ್ಚು ಎಂದರೆ ಅದು ಕಟ್ಟಡದ ಭದ್ರತೆ ಮತ್ತು ಬಾಳಿಕೆಯನ್ನು ಕಡಿಮೆ ಮಾಡುವುದಲ್ಲ" ಎಂದು ಅವರು ಹೇಳುತ್ತಿದ್ದರು. ಅವರ ಪ್ರಕಾರ ಭಾರತೀಯ ಶೈಲಿ ಇದಕ್ಕೆ ಮಾದರಿಯಾಗಿತ್ತು. ಮಣ್ಣು ಮತ್ತು ಇಟ್ಟಿಗೆಯಲ್ಲಿ ಕಟ್ಟಿದ ಅನೇಕ ಮನೆಗಳು ಇನ್ನೂ ದೃಢವಾಗಿ ನಿಂತಿರುವುದೇ ಇದಕ್ಕೆ ಸಾಕ್ಷಿ.

ಕಟ್ಟಡ ಕಟ್ಟಲು ಬೇಕಾದ ಹಣವಷ್ಟೇ ಅಲ್ಲದೆ ಸಿಮೆಂಟ್, ಉಕ್ಕು ಮತ್ತು ಗಾಜು ಮುಂತಾದ ಸಾಮಗ್ರಿಗಳ ಉತ್ಪಾದನೆಗೆ ಬೇಕಾದ ಶಕ್ತಿ ಮತ್ತು ಶ್ರಮವನ್ನೂ ಬೇಕರ್ ಗಂಭೀರವಾಗಿ ಪರಿಗಣಿಸಿದ್ದರು. ಅವರು "ನಮ್ಮಂಥ ದೇಶದಲ್ಲಿ ಯಾರೊಬ್ಬರಿಗೂ ಅನಗತ್ಯವಾಗಿ ಹಣ, ಸಾಮಗ್ರಿ ಅಥವಾ ಶಕ್ತಿಯನ್ನು ವ್ಯರ್ಥಮಾಡುವ ಮತ್ತು ದುರುಪಯೋಗಮಾಡುವ ಅಧಿಕಾರ ಇಲ್ಲ" ಎಂದು ಹೇಳುತ್ತಿದ್ದರು.

ಮನೆ ಕಟ್ಟುವ ಸ್ಥಳದಿಂದ ಐದು ಮೈಲಿಯೊಳಗೆ ದೊರಕುವ ಸಾಮಗ್ರಿಗಳನ್ನು ಮಾತ್ರ ಬಳಸಿ ಮನೆ ಕಟ್ಟಬೇಕು ಎಂಬ ಗಾಂಧೀಯವರ ಅನಿಸಿಕೆಯನ್ನು ಅವರು ಒಪ್ಪಿದ್ದರು. ಅದು ಬೇಕರ್ ಅವರು ನವೀನ ಪ್ರಯೋಗಗಳನ್ನು ಮಾಡಲು ಕಾರಣವಾಯಿತು ಮತ್ತು ಹಾಗೆ ಮಾಡಿದ್ದರಿಂದ ಅವರು ನಿರ್ಮಿಸಿದ ಕಟ್ಟಡಗಳು ಒಂದಕ್ಕಿಂತ ಒಂದು ಬೇರೆಯಾಗಿಯೇ ಇವೆ.

ತಿರುವನಂತಪುರದಲ್ಲಿ ಅವರು ನಿರ್ಮಿಸಿರುವ 'ಅಭಿವೃದ್ಧಿ ಅಧ್ಯಯನ ಕೇಂದ್ರ'ದ ಕಟ್ಟಡವು ಒಂದು ಮಹಾನ್ ಕೃತಿಯಾಗಿದೆ. ಅಲ್ಲದೆ, ಸೇಕ್ರೆಡ್ ಹಾರ್ಟ್ ಸೆಂಟರ್ ಚರ್ಚು, ಚಿತ್ರಲೇಖ ಸ್ಟುಡಿಯೋ ಸಂಕೀರ್ಣ, ಟೂರಿಸ್ಟ್ ಸೆಂಟರ್, ಕಾಫಿ ಹೌಸ್, ಶಿಶು ಗ್ರಾಮ ಇತ್ಯಾದಿ ಅವರು ನಿರ್ಮಿಸಿದ ಇತರ ಕೆಲ ಪ್ರಮುಖ ವಿಶಿಷ್ಟ ನಿರ್ಮಾಣಗಳಾಗಿವೆ. ಅವರು ಎಂದೂ ತಾವು ಕಟ್ಟಡ ನಿರ್ಮಿಸುವ

ಜಾಗದಲ್ಲಿ ಇದ್ದ ಯಾವುದೇ ಮರವನ್ನು ಕಡಿಯುವುದಾಗಲೀ ಮತ್ತು ನೆಲವನ್ನೂ ಸಮಗೊಳಿಸುವುದಾಗಲೀ ಮಾಡುತ್ತಿರಲಿಲ್ಲ.

ಬೆಕರ್‌ರವರು ಇತರೊಂದಿಗೆ ಸೇರಿ 'ಗ್ರಾಮೀಣ ಅಭಿವೃದ್ಧಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರ'ವನ್ನು ೧೯೮೫ರಲ್ಲಿ ಹುಟ್ಟುಹಾಕಿದರು. ಈ ಕೇಂದ್ರವು ಲಾಭೇತರ ಸಂಸ್ಥೆಯಾಗಿದ್ದು ಬಡವರಿಗಾಗಿ ಅದರಲ್ಲೂ ಸಮೂಹ ಮಟ್ಟದಲ್ಲಿ 'ಕಡಿಮೆ ಖರ್ಚಿನ' ಮನೆಗಳನ್ನು ನಿರ್ಮಿಸುವ ವಿಚಾರವನ್ನು ಪ್ರಚಾರಮಾಡುತ್ತದೆ. ಬೆಕರ್‌ರವರು ಕಟ್ಟಡ ರಚನೆಗೆ ಸಂಬಂಧಿಸಿದಂತೆ 'ನೀವೇ ಮಾಡಿ ನೋಡಿ' ಎಂಬ ಶೀರ್ಷಿಕೆಯಡಿಯಲ್ಲಿ ಅನೇಕ ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದಾರೆ. ಅವರು ಅನೇಕ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಸತಿ ಸಂಬಂಧೀ ಸಮಿತಿಗಳಿಗೆ ಮಾತ್ರವಲ್ಲದೆ ಹುಡ್ಕೋ, ಯೋಜನಾ ಆಯೋಗ ಮುಂತಾವುಗಳಲ್ಲಿ ಕೂಡ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ.

ಅವರಿಗೆ ೧೯೮೦ರಲ್ಲಿ ಭಾರತೀಯ ಪೌರತ್ವ ಮತ್ತು ಅದೇ ವರ್ಷ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ೧೯೮೨ರಲ್ಲಿ ಯು.ಎನ್.ಓ ಹ್ಯಾಬಿಟಾಟ್ ಪ್ರಶಸ್ತಿ ಮತ್ತು ವರ್ಲ್ಡ್ ಹ್ಯಾಬಿಟಾಟ್ ಪ್ರಶಸ್ತಿಗಳೂ ಸಂದಿವೆ. ಸೆಂಟ್ರಲ್ ಇಂಗ್ಲೆಂಡ್ ವಿಶ್ವವಿದ್ಯಾನಿಲಯ ಮತ್ತು ಕೇರಳ ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟೊರೇಟ್ ಪ್ರಶಸ್ತಿಯನ್ನು ನೀಡಿ ಬೆಕರ್‌ರವರನ್ನು ಗೌರವಿಸಿವೆ.

ಬೆಕರ್ ತಮ್ಮ ತೊಂಭತ್ತನೇ ವಯಸ್ಸಿನವರೆಗೂ ಚಟುವಟಿಕೆಗಳಲ್ಲಿ ತೊಡಗಿದ್ದರು. ಅವರು ಅಲಪ್ಪುಳದ ಪುನರ್ನಿರ್ಮಾಣ ಕಾಮಗಾರಿ ಮತ್ತು ಶಬರಿಮಲೈಗಾಗಿ ಶೌಚ ನಿರ್ವಹಣಾ ಯೋಜನೆಯನ್ನು ರೂಪಿಸಲು ಕೆಲಸಮಾಡುತ್ತಿದ್ದರು.

ಅವರ ವಿನ್ಯಾಸಗಳು ಅವರದೇ ಆದ ವ್ಯಕ್ತಿ ವಿಶಿಷ್ಟ ಶೈಲಿಯಾಗಿ ರೂಪುಗೊಂಡಿದ್ದರೂ ಅವರು ತಮ್ಮ ಶೈಲಿಯನ್ನು ಒಂದು ಛಾಪದಡಿ ಹೆಸರಿಸಲು ಒಪ್ಪಲಿಲ್ಲ. ಅವರ ಧ್ಯೇಯ ಅವರ ಈ ವಾಕ್ಯದಲ್ಲಿ ಪ್ರಕಟವಾಗಿದೆ, "ಒಬ್ಬ ಕಟ್ಟಡ ಶಿಲ್ಪಿಯಾಗಿ ನನ್ನ ಅನಿಸಿಕೆ ಏನೆಂದರೆ ಲಾರಿ ಬೆಕರ್ ಕಟ್ಟಡ ಎಂದು ಕರೆಸಿಕೊಳ್ಳುವ ಒಂದು ಸ್ಮಾರಕವನ್ನು ನಿರ್ಮಿಸುವುದು ನನ್ನ ಉದ್ದೇಶವಲ್ಲ. ಬದಲಾಗಿ ಇದು ಮೋಹನಸಿಂಗ್ ಎಂಬ ಒಬ್ಬ ಸಾಮಾನ್ಯನು ತನ್ನ ಕುಟುಂಬದೊಂದಿಗೆ ವಾಸಿಸುತ್ತಿರುವ ಮನೆ ಎಂದು ಕರೆಸಿಕೊಳ್ಳುವ ಮನೆಯನ್ನು ನಿರ್ಮಿಸುವುದು".

ಅನು : ಸುಘೋಷ್ ಕೌಲಗಿ

(ಸಾಭಾರ : ಡೆಕ್ಕನ್ ಹೆರಾಲ್ಡ್)

* * *

ವ್ಯಕ್ತಿ ಶ್ರದ್ಧೆಗೂ ಮೀರಿದ್ದು ಹಿಂದೂ ಧರ್ಮ

– ವಿನೋಬಾ

ಗ್ರಂಥ ಪ್ರಾಮಾಣ್ಯವೆಂದರೆ ಗ್ರಂಥದ ಅರ್ಥವನ್ನು ಗಮನದಲ್ಲಿರಿಸಿಕೊಂಡು ಅದನ್ನು ಪ್ರಮಾಣವೆಂದು ಒಪ್ಪುವುದು. ಅರ್ಥವನ್ನು ಗಮನದಲ್ಲಿರಿಸಿಕೊಳ್ಳದೆ ಗ್ರಂಥದ ಬ್ರಹ್ಮರೂಪವನ್ನು ಒಪ್ಪಿಕೊಳ್ಳುವುದು ಮೂರ್ತಿಪೂಜೆ. ಹಿಂದೂಧರ್ಮದಲ್ಲಿ ಯಾವ ಗ್ರಂಥದ ಅರ್ಥವನ್ನು ಮಾಡಬೇಕಾಗಿದೆಯೋ ಆ ಗ್ರಂಥವು ಸ್ವತಃ ವೇದವಾಗಿದ್ದರೂ ಕೂಡ ಸತ್ಯಾಸತ್ಯತೆಯ ವಿಚಾರ ಮಾಡದೆ ಅಕ್ಷರಶಃ ಮಾನ್ಯ ಮಾಡಬೇಕೆಂಬ ಅರ್ಥಕ್ಕೆ ಮಾನ್ಯತೆ ಕೊಡುವುದೆಂದರೆ ಯಾವ ರೀತಿ ಅರ್ಥಮಾಡಬೇಕೆಂಬ ಪ್ರಶ್ನೆ ಹುಟ್ಟುತ್ತದೆ. ಮತ್ತು ಅಂಥ ಪ್ರಶ್ನೆ ಏನಾದರೂ ಹುಟ್ಟಿದಲ್ಲಿ ಆ ನ್ಯಾಯವನ್ನು ಮರೆಯಲು ಸಾಧ್ಯವಿಲ್ಲ. ಶ್ರೀಮತ್ ಶಂಕರಾಚಾರ್ಯರು ಹೀಗೆ ಹೇಳಿದ್ದಾರೆ: **'ನಹಿ ಶ್ರುತಿ ಶತಮಪಿ ಶೀತೋಗ್ನಿ ರ ಪ್ರಕಾಶೊ ವಾ ಇತಿ ಬ್ರುವತ್ ಪ್ರಾಮಾಣ್ಯ ಮುಪೈತಿ'** (ಗಿ.ಭಾ.೧೮.೬೬)–'ಅಗ್ನಿ ತಣ್ಣಗಿದೆ ಅಥವಾ ಅಂಧಕಾರಮಯವಿದೆ. ಹೀಗೆ ಹೇಳುವಂಥ ನೂರು ಶ್ರುತಿಗಳು ಸಿಕ್ಕರೂ ಕೂಡ ಅವು ಪ್ರಮಾಣವಾಗಲಾರವು'.

ಅಗ್ನಿ ತಣ್ಣಗಿದೆ ಎಂದು ಹೇಳುವ ಒಂದು ಶ್ರುತಿ ವಚನವಿದೆಯೆಂದು ತಿಳಿದುಕೊಳ್ಳಿ ಈ ವಚನದ ಬಗ್ಗೆ ಏನೇನು ಯೋಚಿಸಲು ಸಾಧ್ಯವಿದೆ? ಒಂದನೆಯ ಮಾತು ಈ ವಾಕ್ಯ ತಪ್ಪೆಂದು ತಿಳಿಯುವುದು. ಇದರಲ್ಲಿ ಸತ್ಯಪ್ರೀತಿ ಮತ್ತು ನಿರ್ಭಯ ವೃತ್ತಿ ಎಂಬ ಎರಡು ಗುಣಗಳಿವೆ. ಯಾವುದೇ ಮಾತಿನ ಅರ್ಥವನ್ನು ತಿಳಿಯಲು ಸಾಧಾರಣ ಮನುಷ್ಯನ ಬಳಿಯಿರುವ ಸಾಧನವು ಬುದ್ಧಿಯೊಂದೇ. ಆದ್ದರಿಂದ ಬುದ್ಧಿ ಒಪ್ಪದೆ ಇರುವ ಮಾತನ್ನು ತಪ್ಪೆಂದು ಹೇಳುವುದರಲ್ಲಿ ಯಾವ ಪಾಪವೂ ಇಲ್ಲ. ಬದಲಿಗೆ, ಬುದ್ಧಿ ಒಪ್ಪದಿರುವ ಮಾತನ್ನು ಸ್ವೀಕರಿಸುವುದರಲ್ಲಿಯೇ ಪಾಪವಿದೆ. ಆದರೆ ಈ ವಿಚಾರ ಪದ್ಧತಿಯಲ್ಲಿ ಚಂಚಲವೃತ್ತಿ ಉಂಟಾಗುವ ಸಂಭವವಿದೆ. ಸಮೀಕ್ಷಣೆಯ ದೃಷ್ಟಿಯಿಂದ ಗ್ರಂಥ ಪರೀಕ್ಷಣೆ ಮಾಡುವ ಉತ್ಸಾಹದಲ್ಲಿ ನಾವು ಗ್ರಂಥದ ಮರ್ಮದಿಂದಲೇ ವಂಚಿತರಾಗಿ ಉಳಿಯುವಂಥ ಪರಿಸ್ಥಿತಿ ಅನೇಕ ಸಲ ಉಂಟಾಗುತ್ತದೆ. ಇಲ್ಲವೆ, ಸ್ವಲ್ಪ ಉತ್ಪ್ರೇಕ್ಷತೆಯೂ ಉಂಟಾಗುತ್ತದೆ. ಅಗ್ನಿಯು ತಣ್ಣಗಿದೆ ಎಂಬ ಮಾತು ಅನುಭವದೊಂದಿಗೆ ಹೊಂದುವುದಿಲ್ಲವೆಂಬುದೇನೊ ಸರಿಯೆ. ಆದರೆ ನಾವು ಅದನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದೇವೆಯೇ ಹೇಗೆ ಎಂದು ಆಲೋಚಿಸುವುದು ಕೂಡ ಅಗತ್ಯ.

ಎರಡನೆಯ ವಿಚಾರ ಯಾವುದಾದರೂ ಗೂಡಾರ್ಥವಿರಬೇಕೆಂಬುದು. ನಾವು 'ಅಗ್ನಿ' ಇತ್ಯಾದಿ ಶಬ್ದಗಳ ಬಗ್ಗೆ ಯಾವ ಅರ್ಥವನ್ನು ತಿಳಿದಿದ್ದೇವೆಯೋ ಅವು ಬಹುಶಃ ಸರಿಯಾಗಲಾರವು. ಋಷಿಗಳ ಉದ್ದೇಶ ಸತ್ಯವಾದಿ ಮನುಷ್ಯನನ್ನು ಅಗ್ನಿ ಕೂಡ ಸುಡಲಾರದೆಂದೂ ಅಥವಾ ಇನ್ನಾವುದೊ ಗೂಡಾರ್ಥ ಇದ್ದಿರಬಹುದೆಂದೂ ತಿಳಿಸುವುದಾಗಿರಬಹುದು. ಆ ಬಗ್ಗೆ ವಿಚಾರ ಮಾಡುವ ಅಧಿಕಾರವೇ ನಮಗಿಲ್ಲ. ಇದಾಯಿತು ಮೂರ್ತಿಪೂಜೆ. ಭಾಷ್ಯಗಳಲ್ಲಿ ಕೂಡ ಈ ರೀತಿ ಉಪಾಯ ಸೂಚಿಸಲಾಗಿದೆ.-**ಯದಿ ಬ್ರೂಯಾತ್ ಶೀತಃ ಅಗ್ನಿಃ ಅ ಪ್ರಕಾಶೊ ವಾ ಇತಿ ತಥಾಪಿ ಅರ್ಥಾಂತರಂ ಶೃತೇಃ ವಿವಕ್ಷಿತಂ ಕಲ್ಪ್ಯಂ** (ಗಿ.ಭಾ. ೧೮. ೬೬೧) ಅಗ್ನಿ ತಣ್ಣಗಿದೆ ಎಂದು ಹೇಳುವುದಾದರೆ ಅದರ ಬೇರೆ ಅರ್ಥದ ಬಗ್ಗೆ ಆಲೋಚಿಸಬೇಕು. ಅಂದರೆ ಯಾರೇ ಆಗಲಿ ತಪ್ಪು ಅರ್ಥ ಮಾಡಿಕೊಳ್ಳದೆ ಇರಲಿ. ಮೂರ್ತಿಪೂಜೆಯಲ್ಲಿ ಸುಳ್ಳು ವಿಚಾರಗಳಿಗೆ ಅವಕಾಶವಿಲ್ಲ. ಯಾರಿಗೆ ವಿಚಾರ ಸುಳ್ಳೆಂದೆನಿಸುತ್ತದೊ ಅವರು ಅಂಥ ವಿಚಾರವನ್ನೇ ಮಾಡದಿರಲಿ. ಮೂರ್ತಿಪೂಜೆಯನ್ನು ಮಾಡಲೇಬೇಕೆಂದು ಹಿಂದೂಧರ್ಮ ಹೇಳುವುದಿಲ್ಲ ಮತ್ತು ಮೂರ್ತಿಪೂಜೆಯನ್ನು ಮಾಡುವುದೇ ಆದಲ್ಲಿ ಇಂಥ ಮೂರ್ತಿಯನ್ನೇ ಪೂಜೆ ಮಾಡಬೇಕೆಂಬ ಆಗ್ರಹ ಕಿಂಚಿತ್ತೂ ಇಲ್ಲ. ಹಾ, ಇಷ್ಟೊಂದು ಇದೆ. ಏನೆಂದರೆ ಯಾವುದೇ ಮೂರ್ತಿಯಪೂಜೆಯನ್ನು ಶಿಫಾರಸ್ಸು ಮಾಡುವುದಾದರೆ, ಹಿಂದೂಧರ್ಮ ದೇವರ ವಾಙ್ಮಯಿರೂಪದ ಭಗವಂತನ ಪೂಜೆಮಾಡಲು ಶಿಫಾರಸ್ಸು ಮಾಡುವುದು. ಏಕೆಂದರೆ ಕೇವಲ ಮೂರ್ತಿಪೂಜೆಯ ದೃಷ್ಟಿಯಿಂದ ನೋಡಿದಲ್ಲಿ, ಅದು ಗೋ ಪೂಜೆಯಾಗಿರಬಹುದು ಅಥವಾ ಕುದುರೆ ಪೂಜೆಯಾಗಿರಬಹುದು ಎರಡೂ ಸಮಾನವೆ, ಆದರೂ ವೇದವು ವ್ಯಾವಹಾರಿಕ ತರತಮ ವಿವೇಕದ ದೃಷ್ಟಿಯಿಂದ ಗೋ ಪೂಜೆಯ ಶಿಫಾರಸ್ಸು ಮಾಡುವಂತೆಯೆ ವೇದ ಪೂಜೆಯನ್ನು ಶಿಫಾರಸು ಮಾಡಿದೆಯೇ ಹೊರತು ವೇದ ಪ್ರಾಮಾಣ್ಯದ ಪೂಜೆಯನ್ನು ಶಿಫಾರಸು ಮಾಡಿಲ್ಲ. ಆದರೆ ಇದರ ಅರ್ಥ ಯಾರು ಈ ಶಿಫಾರಸ್ಸನ್ನು ಅನುಷ್ಠಾನಕ್ಕೆ ತರುವುದಿಲ್ಲವೊ ಅವರು ಹಿಂದುತ್ವವನ್ನು ಕಳೆದುಕೊಳ್ಳುತ್ತಾರೆಂದಾಗಲಿ ಅದರಿಂದ ವಂಚಿತರಾಗುತ್ತಾರೆಂದಾಗಲಿ ಅರ್ಥವಲ್ಲ.

ಗ್ರಂಥಪೂಜೆಯ ಈ ಕಲ್ಪನೆ ಯಾರಿಗೆ ಶುಷ್ಕವೆನಿಸುತ್ತದೊ ಅವರು (೩) 'ಅಗ್ನಿ ನಿಜವಾಗಿಯೂ ತಣ್ಣಗಿದೆ' ಈ ಗ್ರಂಥ ಪ್ರಾಮಾಣ್ಯದ ಮೂರನೆಯ ವಿಚಾರವನ್ನು ಇಷ್ಟಪಡುತ್ತಾರೆ. ಈ ಅಂತಿಮ ಕಲ್ಪನೆಯು ಅಸಂಭವವೇನಲ್ಲ ಎಂದು ಹೇಳುವುದು ಅಗತ್ಯವಾಗಿದೆ. ಅಂದರೆ ಯಾರಿಗೆ ಯುರೋಪಿನ ಧರ್ಮ ಸಂಪ್ರದಾಯಗಳ ಪರಿಚಯವಿದೆಯೊ ಅವರಿಗೆ ಇದು ಅರ್ಥವಾಗುವುದು.

ಜ್ಯೋತಿಷ್ಯದ ವಿಷಯದಲ್ಲಿ ಗೆಲಿಲಿಯೋನೊಂದ ಯಾವೆಲ್ಲ ಶೋಧನೆಗಳಾದವೊ ಅವು ಬೈಬಲ್ಲಿನ ಹಳೆಯ ಒಡಂಬಡಿಕೆಯ ಕೆಲ ವಚನಗಳ ಅಕ್ಷರಾರ್ಥ ಅಥವಾ ಮೀಮಾಂಸಕರ ಭಾಷೆಯಲ್ಲಿ ಶ್ರುತ್ಯರ್ಥಕ್ಕೆ ವಿರೋಧವಾಗಿರುತ್ತಿತ್ತು. ಶ್ರುತಿಯಲ್ಲಿ ಅಗ್ನಿಯು ತಣ್ಣಗಿದೆಯೆಂದು ಹೇಳಿರುವುದರಿಂದ ಅಗ್ನಿ ಬಿಸಿ ಎಂದು ಹೇಳುವ ಅಧಿಕಾರ ಯಾರಿಗೂ ಇಲ್ಲ ಇದು ಗ್ರಂಥ ಪ್ರಾಮಾಣ್ಯದ ಮುಖ್ಯ ಸಿದ್ಧಾಂತವಾಯಿತು. ಆದ್ದರಿಂದ ಗೆಲಿಲಿಯೊನಿಗೆ ಅಮಾನುಷ ಪೀಡೆಯನ್ನು ಕೊಡಲಾಯಿತು. ಈ ಮಾತು ಯುರೋಪಿನ ಇತಿಹಾಸದಲ್ಲಿ ದಾಖಲಿಸಲಾಗಿದೆ. ಆದರೆ ಹಿಂದೂ ಧರ್ಮದಲ್ಲಿ ಗ್ರಂಥ ಪ್ರಾಮಾಣ್ಯಕ್ಕೆ ಎಂದೂ ಸ್ಥಾನಸಿಗಲಿಲ್ಲ, ಆದ್ದರಿಂದ ಶಂಕರಾಚಾರ್ಯರು ಹಿಂದೂ ಧರ್ಮದ ಉದಾರನೀತಿಯನ್ನು ಹೀಗೆ ಪ್ರಕಟಗೊಳಿಸಿದ್ದಾರೆ. "
ಶ್ರುತಿಯಲ್ಲಿ ಸೃಷ್ಟಿ ವಿಜ್ಞಾನಕ್ಕೆ ಸಂಬಂಧಿಸಿದ ಯಾವ ವಚನಗಳು ಬಂದಿವಿಯೊ ಅವುಗಳನ್ನು ಅಕ್ಷರಶಃ ಸ್ವೀಕರಿಸಲೇ ಬೇಕು, ಎಂದೇನೂ ಇಲ್ಲ".

ವೇದಗಳ ವಿಷಯದಲ್ಲಿ ಮೇಲೆ ಕಾಣಿಸಲಾದ ಮೂರು ವಿಚಾರಗಳಲ್ಲಿ ಮೂರನೇ ವಿಚಾರವು ಸತ್ಯವನ್ನು ಸಂಕೋಚಿಸುವಂತದ್ದಾಗಿರುವುದರಿಂದ ಹಿಂದೂ ಧರ್ಮದ ಕಲ್ಪನೆಗೆ ಅದು ಸರ್ವತಃ ವಿರುದ್ಧವಾಗಿದೆ. ಮತ್ತು ಮೊದಲನೆ ವಿಚಾರದಲ್ಲಿ ಸತ್ಯಪ್ರೀತಿಯಿದ್ದಾಗ್ಯೂ ಅಪ್ರತಿಷ್ಠಿತ ಪಾಯದ ಮೇಲೆ ನಿಂತಿರುವ ಅಸ್ಥಿರ ರಚನೆ ಯಾವಾಗ ಬಿದ್ದು ಹೋಗುವುದೆಂಬುದರ ಭರವಸೆ ಇಲ್ಲದಿರುವ ಕಾರಣ ಹಿಂದೂಧರ್ಮ ಎರಡನೆಯ ಕಲ್ಪನೆಯನ್ನು ಮೂರನೆಯದಕ್ಕಿಂತ ಅಧಿಕ ಗ್ರಾಹ್ಯವೆಂದು ಒಪ್ಪಿದೆ. ಅದು ಕೂಡ ಮೂರ್ತಿಪೂಜಾ ದೃಷ್ಟಿಯಿಂದ. ಆದರೆ ಮೂರ್ತಿಪೂಜೆ ಹಿಂದೂಧರ್ಮದ ಬಹು ಉನ್ನತ ಇಲ್ಲವೆ ಅಪರಿಹಾರ್ಯ ಅಂಗವೆಂದೇನೂ ಒಪ್ಪಿಲ್ಲ. ಆದ್ದರಿಂದ ಹಿಂದೂ ಧರ್ಮವು ವೇದಪೂಜೆಯ ಪ್ರಸ್ತಾವವನ್ನು ಶಿಫಾರಸ್ಸಿನ ರೀತಿಯಲ್ಲಿ ಮಾತ್ರವೇ ಮಾಡಿದೆ ಎಂದು ತಿಳಿಯಬೇಕಾಗುವುದು. **ತದಾ ಗಂಥಾಸಿ ನಿರ್ವೇದಂ ಸ್ತೋತ್ರತವ್ಯಸ್ಯ ಶ್ರುತಸ್ಯಚ**– ಈ ಗೀತಾ ವಚನದಿಂದ ಹಿಂದೂಧರ್ಮದ ಅಡಿಪಾಯ ವೇದದ ಮೇಲಲ್ಲ, ನಿರ್ವೇದದ ಮೇಲೆ ನಿಂತಿದೆ ಎಂಬುದು ಕಂಡು ಬರುತ್ತದೆ. ಜ್ಞಾನೇಶ್ವರ ಮಹಾರಾಜರ ಪ್ರೇಮಮಯ ದೂರೊಂದಿದೆ. ವೇದವು ಮೂರು ವರ್ಣಗಳ ಕಿವಿಯವರೆಗೆ ತಲುಪಿತು. ಈ ಸಂಬಂಧದಲ್ಲಿ ಇಷ್ಟು ಮಾತ್ರ ಹೇಳಬಹುದು, ಮೂರೂ ವರ್ಣಗಳ ಕಿವಿಯವರೆಗೆ ತಲುಪಿತು ಎನ್ನುವುದರ ಬದಲಿಗೆ ಮೂರು ವರ್ಣಗಳ ಕಿವಿಗಳು ವೇದಗಳವರೆಗೆ ತಲುಪಿದವು ಎಂಬುದು ವಸ್ತು ಸ್ಥಿತಿಗೆ ಹೆಚ್ಚು ಹತ್ತಿರವಾಗಿದೆ. ಆದರೆ ಗೀತೆಯ 'ಚಾರ್ಜ್' ಅಥವಾ ಆಕ್ಷೇಪಣೆ ವೇದ ಮೂರು ಗುಣಗಳಲ್ಲಿಯೇ ಸುತ್ತುತ್ತಿರುತ್ತದೆಯೆಂಬ ಆಕ್ಷೇಪಣೆ ಹೆಚ್ಚು ಗಂಭೀರ

ಸ್ವರೂಪದ್ದಾಗಿದೆ. ಇದರಿಂದ ಸಾಕ್ಷಾತ್ ವೇದಗಳ ವಿಷಯದಲ್ಲಿಯೂ ಮತ್ತು ಕೈಮುತಿಕ ನ್ಯಾಯದಿಂದ ಎಲ್ಲ ಗ್ರಂಥಗಳ ವಿಷಯದಲ್ಲಿಯೂ ಹಿಂದೂ ಧರ್ಮ ಯಾವ ದೃಷ್ಟಿಯನ್ನಿಟ್ಟುಕೊಂಡಿದೆಯೆಂಬುದರ ಕಲ್ಪನೆ ಬರಬಹುದು.

ಪೂಜ್ಯ ಬುದ್ಧಿ ಒಂದು ವಸ್ತುವಾದರೆ, ಪ್ರಾಮಾಣ್ಯ ಬುದ್ಧಿ ಬೇರೊಂದು ಬಗೆಯದು. ಯಾವ ತಾಯಿಯ ಉದರದಿಂದ ನಮ್ಮ ಜನ್ಮವಾಯಿತೊ ಆ ತಾಯಿಯ ವಿಷಯದಲ್ಲಿ ಪೂಜ್ಯ ಬುದ್ಧಿಯನ್ನಿರಿಸಿಕೊಳ್ಳುವುದು ನಮ್ಮ ಪುತ್ರಧರ್ಮವೇನೋ ಹೌದು. ಆದರೆ ಆ ಭಾವನೆ ಸರಿಯಿರಲಿ, ಬಿಡಲಿ ಅದನ್ನು ಪ್ರಮಾಣವೆಂದು ಒಪ್ಪಿಕೊಳ್ಳಬೇಕೆಂಬ ಪ್ರಾಮಾಣ್ಯ- ಬುದ್ಧಿಯ ಬಂಧವನ್ನು ಅಂಗೀಕರಿಸುವುದು ಕದಾಪಿ ಧರ್ಮವಲ್ಲ. ಭೂತಕಾಲದ ಪ್ರವಾಹ ಯಾವ ಸಾಹಿತ್ಯ ಕ್ಷೇತ್ರಗಳ ಮೂಲಕ ಹರಿದು ಬಂದಿದೆಯೋ ಆ ಎಲ್ಲ ಕ್ಷೇತ್ರಗಳ ವಿಷಯದಲ್ಲಿ ಸಾಮಾನ್ಯವಾಗಿಯೂ ಮತ್ತು ಅದರ ಉಗಮಸ್ಥಾನದ ವಿಷಯದಲ್ಲಿ ವಿಶೇಷವಾಗಿ ಪೂಜ್ಯ-ಬುದ್ಧಿಯನ್ನಿರಿಸಿಕೊಳ್ಳುವುದು ವ್ಯವಹಾರ ಧರ್ಮವಷ್ಟೆ. ಆದರೆ ಇದಕ್ಕಿಂತ ಹೆಚ್ಚಾಗಿ ಅಂದರೆ ಪೂರ್ವಕಾಲದ ಪ್ರವಾಹವನ್ನು ಕಣ್ಣುಮುಚ್ಚಿಕೊಂಡು 'ಪ್ರಮಾಣ'ವೆಂದು ತಿಳಿಯುವುದು ವ್ಯವಹಾರಿಕ ಧರ್ಮವೂ ಅಲ್ಲ. ಅಲ್ಲದೆ ಅದು ಹಿಂದೂಧರ್ಮವಂತೂ ಅಲ್ಲವೇ ಅಲ್ಲ. ವರ್ತಮಾನ ಕಾಲವನ್ನು ಭೂತಕಾಲದೊಂದಿಗೆ ಕಟ್ಟಿ ಹಾಕುವುದು ಪ್ರಗತಿಯನ್ನು ವಿರೋಧಿಸುವುದೇ ಆಗಿದೆ. ಬ್ರಹ್ಮಪುತ್ರದ ಪ್ರವಾಹವು ಉಗಮದ ನಂತರ ನೂರಾರು ಮೈಲಿವರೆಗೆ ಪೂರ್ವದಿಕ್ಕಿನತ್ತ ಹರಿಯುತ್ತದೆ. ಪೂರ್ವದಿಕ್ಕಿನತ್ತ ಹರಿಯುವ ಈ ಪ್ರವಾಹದೊಂದಿಗೆ "ಬ್ರಹ್ಮಪುತ್ರದ ನೀರು ತನ್ನ ಬಂಧನ ಇರಿಸಿಕೊಳ್ಳದಿದ್ದರೆ ಅದಕ್ಕೆ ಗಂಗೆಯ ಸಂಗತಿಯ ಭಾಗ್ಯ ದೊರೆಯುತ್ತಿತ್ತೇ". ಆದರೆ ಆ ನೀರು ಹೀಗೆ ಆಲೋಚಿಸಿತು- "ಬ್ರಹ್ಮಪುತ್ರದ ಸಿದ್ಧಾಂತ ಪೂರ್ವದಿಕ್ಕಿನತ್ತ ಹರಿಯುವುದಾಗಿರದೆ ನಿಮ್ನ ದಿಕ್ಕಿನತ್ತ ಹರಿಯುವುದಾಗಿದೆ, ಆದರೆ ಹರಿವು ತೋರಿಕೆಯಲ್ಲಿ ಪೂರ್ವಗಾಮಿಯಾಗಿತ್ತು. ವಸ್ತುತಃ ಅದು ಪೂರ್ವಗಾಮಿಯಾಗಿರದೆ ನಿಮ್ನಗಾಮಿಯೇ ಆಗಿತ್ತು. ಈಗ ನಿಮ್ನಭಾಗ ದಕ್ಷಿಣದತ್ತ ಇರುವುದರಿಂದ ನಾನು ಕೂಡ ದಕ್ಷಿಣ ದಿಕ್ಕಿನತ್ತಲೇ ಹರಿಯುತ್ತ ಹೋಗಬೇಕು. ಆದರೆ ಇದು ಬಾಹ್ಯ ದೃಷ್ಟಿಯಲ್ಲಿ ಪೂರ್ವ ಪರಂಪರಾನುಸಾರ ಇಲ್ಲವೆಂದೆನಿಸಿದರೂ ಬೇರೆ ಉಪಾಯವೇ ಇಲ್ಲ." ಗ್ರಂಥ- ಪ್ರಾಮಾಣ್ಯವನ್ನು ಸ್ವೀಕಾರ ಮಾಡಿದ ಬಳಿಕ ಇಂಥ ಮುಕ್ತ ವೃತ್ತಿ ಉಳಿಯಲಾರದು. ಆಗ ಅಕ್ಷರಾರ್ಥವೇ ಗ್ರಂಥದ ನೇರ ಅರ್ಥವೆಂದಾಗುತ್ತದೆ. ಈ ಮಾತನ್ನು ಒಪ್ಪುವುದು ಅಪರಿಹಾರ್ಯವಾಗಿ

ಬಿಡುತ್ತದೆ. ಏಕೆಂದರೆ ಗ್ರಂಥ– ಪ್ರಾಮಾಣ್ಯದ ತತ್ವವನ್ನು ಸ್ವೀಕರಿಸಿದ ಮೇಲೆ 'ಯಥಾಶ್ರುತ' ಅರ್ಥ ಮಾಡಿದರೇನೇ ಸ್ವಲ್ಪ ನಿಯಂತ್ರಣವಿರುವುದು. ಹಾಗೆ ಮಾಡದೇ ಹೋದಲ್ಲಿ ಯಾವಾಗಲೂ ಅಕ್ಷರಾರ್ಥ ಅಂದರೆ ಶ್ರುತಿಯಾರ್ಥ ಬಿಟ್ಟು 'ಲಕ್ಷಣಾ' ಮಾಡುತ್ತಲೇ ಹೋದಲ್ಲಿ ಸಾಧ್ಯವಾದಷ್ಟು ಅನವಸ್ಥೆಯ ಪ್ರಸಂಗ ಬಂದು ಬಿಡುವುದು. ಆದ್ದರಿಂದ **ಶ್ರುತಿರ್ನ್ಯಾಯ್ಯಾ ನ ಲಕ್ಷಣಾ** ಎಂಬ ಸಿದ್ಧಾಂತವನ್ನು ಸ್ವೀಕರಿಸಬೇಕಾಗುತ್ತದೆ. ಹಿಗೆ ಮಾಡಿದಾಗ ಅನೇಕ ಬಾರಿ ಸತ್ಯದ ಕತ್ತನ್ನು ಹಿಸುಕಿದಂತಾಗುತ್ತದೆ.

ಯಾವಾಗಲಾದರೊಮ್ಮೆ ಪೂರ್ವದ ಸಿದ್ಧಾಂತವನ್ನು ಸ್ಥಿರವಾಗಿಟ್ಟುಕೊಂಡೆ ಅಥವಾ ಸ್ಥಿರವಾಗಿಡುವುದಕ್ಕಾಗಿಂಯೇ ಹೊರಗಿನ ಪೋಷಾಕನ್ನು ಬದಲಾಯಿಸಬೇಕಾಗುತ್ತದೆ. ಕೆಲವೊಮ್ಮೆ ಪೂರ್ವಸಿದ್ಧಾಂತವೆ ತಪ್ಪೆಂದು ಸಿದ್ಧವಾದ ಕಾರಣದಿಂದ ಬಿಟ್ಟುಬಿಡುವ ಪ್ರಸಂಗ ಬರುತ್ತದೆ. ಗ್ರಂಥಪ್ರಾಮಾಣ್ಯದ ಬೆಳ್ಳಿ ಬೇಡಿಯನ್ನು ಧರಿಸಿದ ಮೇಲೆ ಈ ಎರಡು ಮಾತುಗಳ ಸ್ವಾತಂತ್ರ್ಯವಿರುವುದಿಲ್ಲ ಆದ್ದರಿಂದ ಹಿಂದೂಧರ್ಮವು ಯಾವುದೇ ಗ್ರಂಥದ ವೇದಗಳನ್ನು ಕೂಡ ಪ್ರಾಮಾಣ್ಯವನ್ನು ಸ್ವೀಕರಿಸಿಲ್ಲ. ಯಾರು ವೇದ ಪ್ರಾಮಾಣ್ಯದ ಮೇಲೆ ಒತ್ತು ಕೊಡುತ್ತಾರೋ ಅವರದು ಕೇವಲ ನಾಲ್ಕು ವೇದಗಳಿರುವುದಿಲ್ಲ, **ಅನಂತಾವೈ ವೇದಾಃ** ವೇದಗಳು ಅನಂತವಾಗಿವೆ ಎಂಬುದು ಅವರ ಹೇಳಿಕೆಯಾಗಿದೆ. ಈ ಅನಂತ ವೇದಗಳಿಗೂ ಗ್ರಂಥ ಪ್ರಾಮಾಣ್ಯಕ್ಕೂ ಯಾವ ಸಂಬಂಧವಿಲ್ಲ ಏಕೆಂದರೆ ಅವು ಗ್ರಂಥಗಳೇ ಅಲ್ಲ. ಇಂಥ ಸ್ಥಿತಿಯಲ್ಲಿ 'ವೇದ' ವಿಶೇಷ ಹೆಸರಾಗಿರದೆ 'ಸಾಮಾನ್ಯ' ಹೆಸರಾಗಿರುತ್ತದೆ. ಅದರ ಅರ್ಥ 'ಆತ್ಮಿಕ ಜ್ಞಾನ' ಸ್ವರೂಪದ್ದಾಗಿರುತ್ತದೆ. ಈ ಅನಂತ ವೇದಗಳದಷ್ಟೆ ಅಲ್ಲ ಒಂದು ಋಗ್ವೇದದ ಅತ್ಯಲ್ಪ ಅಧ್ಯಯನದಿಂದ ಆಧ್ಯಾತ್ಮಿಕ ದರ್ಶನದ ಅಂತಿಮ ನೆಗೆತ ಎಷ್ಟೊಂದು ಎತ್ತರಕ್ಕೆ ಹೋಗಬಲ್ಲದೆಂಬ ವ್ಯಕ್ತಿಶಃ ವಿಶ್ವಾಸ ನನಗಾಯಿತು. ಇದರ ಪ್ರತ್ಯಕ್ಷ ಸಾಕ್ಷಿ ವೇದಗಳಲ್ಲಿ ದೊರೆಯಬಹುದು. ಆದರೆ ನಮ್ಮ ಶ್ರದ್ಧೆ ಯಾವರೀತಿಯಲ್ಲಿಯೆ ಇರಲಿ ಹಿಂದೂಧರ್ಮದ ವ್ಯಾಪಕ ಸ್ವರೂಪವನ್ನು ವ್ಯಕ್ತಿ ವಿಷಯಕ ಶ್ರದ್ಧೆಯಿಂದ ಮರ್ಯಾದಿತಗೊಳಿಸುವುದು ಅನುಚಿತ.

(ಮುಂದುವರೆಯುವುದು) ಅನು : ಸು.ಕೌ

* * *

ಜನಪದ ನಿಲಯದ ಅಂತರಂಗದಲ್ಲಿ ೪೩

– *ಸುರೇಂದ್ರ ಕೌಲಗಿ*



೧೯೭೪ರ ಜೂನ್ ೫ರಂದು ಜಯಪ್ರಕಾಶ್ ನಾರಾಯಣರು ತಮ್ಮ ಸಂಪೂರ್ಣಕ್ರಾಂತಿ ಆಂದೋಲನವನ್ನು ಪ್ರಾರಂಭಿಸಿದರು. ಮುಂದಿನ ವರ್ಷ ಅಂದರೆ ೧೯೭೫ರ ಸುಮಾರಿನಲ್ಲಿ ಜಯಪ್ರಕಾಶ್ ನಾರಾಯಣರು ಮೇಲುಕೋಟೆಗೆ ಬಂದಿದ್ದರು. ಆಗ ಅವರು ಜನಪದ ನಿಲಯದಲ್ಲಿ ಹಲವಾರು ಗಂಟೆಗಳನ್ನು ಕಳೆದಿದ್ದಲ್ಲದೆ ಊಟವನ್ನೂ ಸಹ ಮಾಡಿದ್ದರು. ಅವರ ಈ ಭೇಟಿಯ ಸ್ಮರಣೆಯನ್ನು ಕಾಪಾಡುವುದಕ್ಕಾಗಿ ಈಗಲೂ ಜನಪದ ನಿಲಯದಲ್ಲಿ ಅವರ ಭಾವಚಿತ್ರ ಅತಿಥಿಗಳ ನಿವಾಸ ಕೋಣೆಯಲ್ಲಿ ನಡೆದ ಘಟನೆಗಳ ಮೂಕಸಾಕ್ಷಿಯಾಗಿ ಹಾಗೂ ಪ್ರೇರಣೆಯ ಸೋತ್ರವಾಗಿ ರಾರಾಜಿಸುತ್ತಿದೆ. ಜಯಪ್ರಕಾಶ್ ನಾರಾಯಣರ ಸಮಾಜವಾದಿ ವಿಚಾರಗಳನ್ನು ಹಾಗೂ ಸಂಪೂರ್ಣಕ್ರಾಂತಿಯ ಮೂಲಕ ಅವರು ತರಬಯಸಿದ್ದ ಸಮಾಜ ವ್ಯವಸ್ಥೆಯಲ್ಲಿಯ ಒಟ್ಟಾರೆ ಬದಲಾವಣೆಗಳನ್ನು ತರುವ ಕಾರ್ಯದಲ್ಲಿ ಜನಪದ ಸೇವಾ ಟ್ರಸ್ಟ್ ತೊಡಗಿಸಿಕೊಂಡಿದ್ದು ವಿಶೇಷವಾದ ಸಂಗತಿಯಾಗಿರಲಿಲ್ಲ, ಏಕೆಂದರೆ ಟ್ರಸ್ಟಿನ ಧ್ಯೇಯೋದ್ದೇಶಗಳು ಜಯಪ್ರಕಾಶರ ಆದರ್ಶಗಳಿಗೆ ಸಮೀಪವಾಗಿರುವುದು ಇದಕ್ಕೆ ಕಾರಣ. ವಿಷಾದದ ಸಂಗತಿಯೇನೆಂದರೆ ಅವರ ವಿಚಾರಗಳನ್ನು ಸಮಾಜದಲ್ಲಿ ತೀವ್ರವಾಗಿ ಪ್ರಚಾರಮಾಡಲು ಸಾಧ್ಯವಾಗದೆ ಇದ್ದದ್ದು. ಇದಕ್ಕೆ ಹಲವಾರು ಕಾರಣಗಳೇನೋ ಇವೆ. ಆದರೆ ಸಮಾಜಿಕ ಬದಲಾವಣೆಯಂಥ ಕಾರ್ಯಕ್ರಮದಲ್ಲಿ ತೊಡಗಲು ಯಾವುದೇ ಪ್ರಕಾರದ ಕಾರಣಗಳು ನೆಪವಾಗಬಾರದೆಂಬುದು ಸಾಮಾಜಿಕ ಪರಿವರ್ತನೆಯಲ್ಲಿ ತೊಡಗಿರುವ ತೃಣಮೂಲ ಮಟ್ಟದ ಕಾರ್ಯಕರ್ತರೆಲ್ಲರು ತಿಳಿದಿರುವಂಥ ವಿಷಯ. ಆದ್ದರಿಂದ ಜಯಪ್ರಕಾಶರ ಕ್ರಾಂತಿಯ ವಿಚಾರಗಳನ್ನು ಜನಪದ ಸೇವಾ ಟ್ರಸ್ಟ್ ತನ್ನ ಇತಿಮಿತಿಯೊಳಗೆ ಪ್ರಚುರ ಪಡಿಸಲು

ಪ್ರಯತ್ನಿಸಿತೆಂಬುದು ಕೊಂಚ ಸಮಾಧಾನದ ಸಂಗತಿ. ಈ ನಿಟ್ಟಿನಲ್ಲಿ ಟ್ರಸ್ಟಿನ ಹೊಸ ಜೀವನ ದಾರಿ ಕೇಂದ್ರದಲ್ಲಿ ಸಂಪೂರ್ಣ ಕ್ರಾಂತಿ ವಿದ್ಯಾಲಯ ಎಂಬ ಕಾರ್ಯಕ್ರಮವನ್ನು ನಡೆಸಿದ್ದನ್ನು ಈಗಾಗಲೆ ಜನಪದ ನಿಲಯದ ಅಂತರಂಗದ ಲೇಖನಗಳ ಸರಣಿಯಲ್ಲಿ ತಿಳಿಸಲಾಗಿದೆ. ಒಟ್ಟು ಹನ್ನೆರಡು ಶಿಬಿರಗಳನ್ನು ನಡೆಸಬೇಕೆಂದು ಸಂಕಲ್ಪಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಬೇಕಾದ ಧನಸಹಾಯವನ್ನು ಟ್ರಸ್ಟಿನ ಮಿತ್ರರಾಗಿದ್ದ ಡಿ. ಹಲಗೇಗೌಡರು ದೊರಕಿಸಿ ಕೊಡುವ ಭರವಸೆಯನ್ನು ಕೊಟ್ಟಿದ್ದರು, ಆ ರೀತಿ ಅವರು ಸುಮಾರು ೭ ಶಿಬಿರಗಳಿಗೆ ಧನ ಸಹಾಯ ಒದಗಿಸಿಕೊಟ್ಟರು. ಮುಂದೆ ಅವರು ದಿವಂಗತರಾದ್ದರಿಂದ ಉಳಿದ ಶಿಬಿರಗಳು ನಡೆಯಲು ಸಾಧ್ಯವಾಗಲಿಲ್ಲ. ಈ ಸಂಕಲ್ಪ ನೆರವೇರಲಿಲ್ಲವೆಂಬ ಕೊರಗು ಜಯಪ್ರಕಾಶ್ ನಾರಾಯಣರ ಸಂಪೂರ್ಣಕ್ರಾಂತಿಯ ಈ ಮಾಹೆಯಲ್ಲಿ ತುಂಬಾ ಬಾಧಿಸುತ್ತಿದೆ. ಈ ವಿಚಾರದಲ್ಲಿ ಆಸಕ್ತಿಯುಳ್ಳ ಮಹನೀಯರು ಸಹಾಯ ಮಡಲು ಮುಂದೆ ಬಂದಲ್ಲಿ ಈ ಸಂಕಲ್ಪವು ಈಡೇರುವ ಸಾಧ್ಯತೆಯಿದೆ. ಜಯಪ್ರಕಾಶ್ ನಾರಾಯಣರು ಬಿಹಾರಿನಲ್ಲಿ ಸ್ಥಾಪಿಸಿದ್ದ ಗ್ರಾಮ ನಿರ್ಮಾಣ ಮಂಡಲದ ಅಧ್ಯಕ್ಷರಾಗಿದ್ದ ಮತ್ತು ಈಗ ಗೌರವಾಧ್ಯಕ್ಷರಾಗಿರುವ ಹಾಗೂ ಸಂಪೂರ್ಣ ಕ್ರಾಂತಿಯ ದಿಗ್ದರ್ಶಕ ಸಮಿತಿಯಲ್ಲಿ ಸದಸ್ಯರಾಗಿದ್ದ ತ್ರಿಪುರಾರಿ ಶರಣ್ ಸಿಂಗ್ ಎಂಬ ಸ್ನೇಹಿತರು ಇತ್ತೀಚಿಗೆ ಟ್ರಸ್ಟಿಗೆ ಭೇಟಿಕೊಟ್ಟಿದ್ದರು. ಗ್ರಾಮ ನಿರ್ಮಾಣ ಮಂಡಲ ಬಹು ದೊಡ್ಡ ಸಂಸ್ಥೆಯಾಗಿ ಬೆಳೆದಿದೆ. ಆ ಸಂಸ್ಥೆಯ ಮೂಲಕ ಜಯಪ್ರಕಾಶ್ ನಾರಾಯಣರು ಸರ್ವೋದಯ ವಿಚಾರಗಳನ್ನು ಸಾಕಾರಗೊಳಿಸಲು ಪ್ರಯತ್ನಿಸಿದ್ದರು. ಆಚಾರ್ಯ ವಿನೋಬಾ ಭಾವೆಯವರ ಭೂದಾನ ಪಾದಯಾತ್ರೆಯ ಸಂದರ್ಭದಲ್ಲಿ ಅಂದಿನ ಗಯಾ ಜಿಲ್ಲೆಯ ಅಂದರೆ ಇಂದಿನ ನವಾದ ಜಿಲ್ಲೆಯ ಸೊಖೋದೇವರಾ ಎಂಬ ಹಳ್ಳಿಯ ಬಳಿ ದೊರಕಿದ್ದ ನೂರಾರು ಎಕರೆ ಭೂದಾನದ ಜಮೀನಿನಲ್ಲಿ ಜಯಪ್ರಕಾಶ್ ನಾರಾಯಣರು ತಮ್ಮ ಸರ್ವೋದಯ ಆಶ್ರಮವನ್ನು ಸ್ಥಾಪಿಸಿದ್ದರು. ಆ ಆಶ್ರಮದಲ್ಲಿ ವ್ಯವಸಾಯವಲ್ಲದೆ ವಿವಿಧ ಗ್ರಾಮೋದ್ಯೋಗಗಳನ್ನೊಳಗೊಂಡಿದ್ದ ಒಂದು ಸಂಕೀರ್ಣವೂ ಸಹ ಇತ್ತು. ಅದರ ಉದ್ಘಾಟನೆಯನ್ನು ರಾಷ್ಟ್ರಪತಿಯಾಗಿದ್ದ ಡಾ॥ ಬಾಬು ರಾಜೇಂದ್ರ ಪ್ರಸಾದ್‌ರು ಮಾಡಿದ್ದರು. ತ್ರಿಪುರಾರಿ ಶರಣರೊಂದಿಗಿನ ಸಂಬಂಧ ೫೦ ವರ್ಷಗಳಷ್ಟು ದೀರ್ಘವಾದದ್ದು. ೧೯೫೪ರಲ್ಲಿ ಜಯಪ್ರಕಾಶ್‌ರೊಂದಿಗೆ ಕೆಲಸ ಮಾಡಲು ಬಿಹಾರಿಗೆ ಹೋದಾಗ ಸರ್ವೋದಯ

ಆಶ್ರಮವನ್ನು ಪ್ರವೇಶಿಸುತ್ತಿದ್ದಂತೆ ಸ್ನೇಹಿತರಾದವರು ತ್ರಿಪುರಾರಿ ಶರಣ್. ಬಿಹಾರದಲ್ಲಿ ಇದ್ದಷ್ಟು ಕಾಲ ತ್ರಿಪುರಾರಿಯೊಂದಿಗಿನ ಸಂಬಂಧ ಕಿರಿಯ ಸಹೋದರನಂತಿತ್ತು. ಈಗಲೂ ಇದೆ. ತ್ರಿಪುರಾರಿಯವರು ಅಖಿಲ ಭಾರತ ಖಾದಿ ಆಯೋಗದ ಖಾದಿ ಪ್ರಮಾಣ ಪತ್ರ ಕೊಡುವ ಸಮಿತಿಯ ಸದಸ್ಯರಾಗಿಯೂ ಕೆಲಸ ಮಾಡಿದ್ದರು ಆಗ ಅವರು ಮೇಲುಕೋಟೆಗೆ ಬಂದು ಜನಪದ ಸೇವಾ ಟ್ರಸ್ಟಿನ ಕಾರ್ಯಕ್ರಮಗಳನ್ನು ನೋಡಿ ತುಂಬಾ ಸಂತೋಷಪಟ್ಟಿದ್ದರು. ಟ್ರಸ್ಟಿನ ಕಾರ್ಯಕ್ರಮಗಳಿಗೆ ಹೆಚ್ಚಿನ ವಿಸ್ತಾರ ದೊರೆಯಬೇಕಾದರೆ ಖಾದಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕೆಂದು ಸಹಲೆಯನ್ನು ಕೊಟ್ಟರಷ್ಟೇ ಅಲ್ಲ ಟ್ರಸ್ಟಿಗೆ ಖಾದಿ ಉತ್ಪಾದನೆ ಮತ್ತು ಮಾರಾಟಕ್ಕೆ ಸಂಬಂಧಿಸಿದಂಥ ಪ್ರಮಾಣ ಪತ್ರವನ್ನೂ ದೊರಕಿಸಿಕೊಟ್ಟರು. ತ್ರಿಪುರಾರಿಯವರು ನವನಿರ್ಮಾಣ ಸಮಿತಿಯ ಸದಸ್ಯರಾಗಿದ್ದಾಗ ರಾಮಮೂರ್ತಿಯವರು ಅದರ ಅಧ್ಯಕ್ಷರಾಗಿದ್ದರು. ರಾಮಮೂರ್ತಿಯವರು ಜಯಪ್ರಕಾಶ್ ನಾರಾಯಣರಿಗೆ ವೈಚಾರಿಕ ಭೂಮಿಕೆಯನ್ನು ಒದಗಿಸಿಕೊಡುತ್ತಿದ್ದರು. ಅವರು ಸರ್ವೋದಯದ ಮಹಾನ್ ಚಿಂತಕರಾಗಿದ್ದರಲ್ಲದೆ ಒಳ್ಳೆಯ ವಾಗ್ಮಿಗಳು ಆಗಿದ್ದರು. ತುರ್ತುಪರಿಸ್ಥಿತಿಯ ಸಮಯದಲ್ಲಿ ೧೯೭೫ರಲ್ಲಿ ಜಯಪ್ರಕಾಶ್ ನಾರಾಯಣರು ಇಂಡಿಯನ್ ಎಕ್ಸ್‌ಪ್ರೆಸ್ ಸಮೂಹದ ಮಾಲೀಕರಾಗಿದ್ದ ಗೊಯೆಂಕಾರ ಸಹಾಯದಿಂದ ಪ್ರಾರಂಭಿಸಿದ್ದ Everyman's ಇಂಗ್ಲಿಷ್ ವಾರಪತ್ರಿಕೆ ಮತ್ತು ಹಿಂದಿ ಅವತರಣಿಕೆಯ ಸಂಪಾದಕರಾಗಿ ಕೆಲಸ ಮಾಡಿದ್ದರು.

ಜಯಪ್ರಕಾಶ್ ನಾರಾಯಣ್‌ರೊಂದಿಗೆ ನನ್ನ ಸಂಪರ್ಕ ಉಂಟಾದುದು ನನ್ನ ಜೀವನ ಯಾತ್ರೆಯ ಒಂದು ಮಹತ್ವದ ಮೈಲಿಗಲ್ಲು. ಅವರ ಸಂಪರ್ಕ ನನ್ನ ವೈಚಾರಿಕ ಬೆಳವಣಿಗೆಯ ಮೇಲೆ ಹಾಗೂ ಕಾರ್ಯವಿಧಾನಗಳ ಮೇಲೆ ಬಹಳಷ್ಟು ಪ್ರಭಾವ ಬೀರಿತು. ಜೀವನಕ್ಕೆ ಒಂದು ಗುರಿ ಮತ್ತು ಓರ್ವ ಗುರು ದೊರೆತಂತಾಯಿತು.

(ಮುಂದುವರೆಯುವುದು)

* * *

ಜನಪದ ಧ್ವನಿ

ಜನಪದ ಧ್ವನಿ ಎಂಬ ಶೀರ್ಷಿಕೆಯಡಿಯಲ್ಲಿ ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಪ್ರಚಲಿತ ವಿದ್ಯಮಾನಗಳ ಬಗ್ಗೆ ನಿಮ್ಮ ಅನಿಸಿಕೆ ಅಥವಾ ಪ್ರತಿಕ್ರಿಯೆಗಳನ್ನು ೧೫ ವಾಕ್ಯಗಳಿಗೆ ಸೀಮಿತಗೊಳಿಸಿ ಬರೆದು ಕಳುಹಿಸಿದಲ್ಲಿ ಅದನ್ನು ಪ್ರಕಟಿಸಲಾಗುವುದು.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(–ಸಂಪಾದಕರು)*

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at INDIVARA, Nagamangala
Phone : 08236 – 298754 e-mail : janapada@yahoo.com